ಅಪರಂಜಿ

ಫೆಬ್ರವರಿ 97

ಕಿಲಿನಗೆಯ ಕಾರಂಜಿ



ಪ್ರಕಾಶ್

ಲೀಲಾ ಮಿರ್ಲೆ

ಆರತಿ

ಡಾ| ಜಿ. ಜಿ. ಮೂರ್ತಿ

ಶಿವರಾಮಕಾರಂತ

ಕು. ಗೋ.

ನಾ. ಕಸ್ತೂರಿ

ಅ. ರಾ. ಮಿತ್ರ

ಇಂದು ರಮೇಶ್

ಶಿವು

ಡಾ| ಶರಣಬಸವೇಶ್ವರ ಅಂಗಡಿ

ಶೀನೂ

ಪ್ರಭು

ಲೀಲಾ ಶೇಖರ್

ಡಾ|| ಶ್ರೀ ವೆಂಕಟರಮಣ

ಬಿಡಿ ಪ್ರತಿ : 3 ರೂ. 50 ಪೈ



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್

ಚಂದಾ ವಿವರ:
ಬಿಡಿ ಪ್ರತಿ: ರೂ. 3.50
ವಾರ್ಷಿಕ ಚಂದಾ: ರೂ. 35
ಆಜೀವ ಚಂದಾ : ರೂ. 350

ವಿಳಾಸ: ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 14 **ಫೆಬ್ರವರಿ 97** **ಸಂಚಿಕೆ-5**

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು 27



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 14 | ಫೆಬ್ರವರಿ 97 | ಸಂಚಿಕೆ-5

ತರತಿಶೋಕಮಾತ್ಮವಿತ್

-ಛಾಂದೋಗ್ಯ


ಆತ್ಮನನ್ನರಿತವರನು ಶೋಕವನ್ನು ದಾಟುತ್ತಾನೆ.

ಅವನು ಹಾಗೆಯೇ ಸಮ್ಮೇಳನಗಳಿಗೆ ಹೋದವನೂ, ತನ್ನ ವ್ಯವಸ್ಥೆಯನ್ನು ತಾನೇ ಮಾಡಿಕೊಂಡು, ತಾನು ಯಾರಿಗೂ ತಿಳಿಯದವನು, ಅವರಿಗೆ ಬೇಡವಾದವನು, ತಾನೇನೂ ಫಲಾತನ ಮೊಮ್ಮಗನಲ್ಲ, ತನ್ನ ಪಾಂಡಿತ್ಯ, ವಿಮರ್ಶೆ, ಸೃಜನಶೀಲ ಕೃತಿಗಳು ಅವರ ಮೇಲೆ ಒಂದು ಧೂಳಿನ ಕಣದಷ್ಟು ಪ್ರಭಾವ ಬೀರಿಲ್ಲ, ಹೆಚ್ಚೇನು- ತಾನು ಅವರಿಗೆ ಬೇಕಿಲ್ಲ ತಾನು ನಿಲ್ ಎಂದುಕೊಂಡು ಹೋದರೆ ಬಚಾವಾಗುತ್ತಾನೆ.

ನಾನು ಪ್ರತಿಷ್ಠಿತ ಎಂದುಕೊಂಡು ಹೋದರೆ ತಾನು ಅನಾಮಧೇಯ ಎಂದೂ, ಸಂಮಾನಿತ ಎಂದುಕೊಂಡು ಹೋದರೆ ಅವಮಾನಿತ ಎಂದೂ ತಿಳಿದು ಖೇದವಾಗುತ್ತದೆ.



ಆದುದರಿಂದ ತನ್ನನ್ನು ತಾನು ನೋಡಿಕೊಳ್ಳಬೇಕು. ತನ್ನ ಕಿಮ್ಮತ್ತು ಕವಡೆಯೂ ಅಲ್ಲ ಎಂದುಕೊಂಡರೆ ಖಂಡಿತ ಖುಷಿಯಾಗಿ ಬರಬಹುದು.



○ ಪ್ರಕಾಶ್

ಕಸ್ತೂರಿ ಶತಾಬ್ಧಿ ಸುದ್ದಿ ಕೇಳಿ, ಕಸ್ತೂರಿ ಅವರು ನಸುನಗುತ್ತ, 'ಇದೇನು ಜನ - ರಾ. ಶಿ?' ಅಂದರಂತೆ!

ಉತ್ತರ ಚಟ್ ಅಂತ ಬಂತು: "ಇದೇ ಬುವಿಯಲ್ಲಿ ನಾ. ಕ!"

★★★

ತೊಂಬತ್ತೇಳರಲ್ಲಾದರೂ ಸರ್ವೇಜನಾ ನಗುನಗುತೋ ಭವಂತಿ!!

★★★

ಬೆಂಗಳೂರಿನಲ್ಲಿ ನಿರುದ್ಯೋಗಿ ಸಂಗೀತ ಕಲಾವಿದರ ಪ್ರತಿಭಟನೆ

-ಸುದ್ದಿ

ಸ್ವಾನ್ ಸಾಂಗ್‌ಗಳೇ ಮೊಳಗಿರಬೇಕು!!

★★★

ತಾಜ್‌ಮಹಲ್ ರಕ್ಷಣೆಗೆ 292 ಕಾರ್ಖಾನೆ ಮುಚ್ಚಲು ಆದೇಶ

-ಪತ್ರಿಕೆ

ಶಹಜಹಾನ್, ಸುದ್ದಿ ಕೇಳಿ ಸಂತಸ ಪಟ್ಟನಂತೆ!

★★★

ದಕ್ಷಿಣ ಆಫ್ರಿಕಾದಲ್ಲಿರುವ ಭಾರತದ ತಂಡದಲ್ಲಿ

ಗಣೇಶ್ ಅವರನ್ನು ಸೇರಿಸಿದ್ದುದ್ದರಿಂದ ಸಕಲ ವಿಘ್ನಗಳೂ ನಿವಾರಣೆಯಾಗಲಿ!!

★★★

ಮೈಷುಗರ್ ಕಾರ್ಖಾನೆ ಅವ್ಯವಹಾರ;

ಸಿ.ಓ.ಡಿ. ತನಿಖೆಗೆ ಆದೇಶ

-ಪತ್ರಿಕೆ

ವಾತಾವರಣ ಕಹಿಯಾದಂತಿದೆ!

★★★

ದಕ್ಷಿಣ ಆಫ್ರಿಕಾ ಸರಣಿ ಜಯ;

ಬ್ಯಾಟಿಂಗ್ ವೈಫಲ್ಯ ಕಾರಣ - ಸಚಿನ್

-ಕ್ರೀಡಾಸುದ್ದಿ

ಅವರು ಶರ್ಲಾಕ್ ಹೋಂಸ್ ವಂಶದವರಿರಬೇಕು.

★★★

ಭಾರತದ ಕ್ರಿಕೇಟ್ ತಂಡವೂ ಏಕೆ Passive Resistance ಆಚರಿಸಬೇಕು??

★★★



"ನಮ್ಗೇನು ವೊಟ್ಟೆ ಕಡ್ಮೆ ಮಾಡ್ಕಳಾ ಯೋಸ್ನೇನೇ ಬ್ಯಾಡಾ, ಅಲ್ವೇನ್ಲಾ!"



ನರ (ಸಿಂಹ) - ಕೇಸರಿ

ಮೆಡಿಟೇಶನ್ ಮತ್ತು ನಾನು

ಲೀಲಾಮಿರ್ಲೆ

ಭಾರತದ ಸಂಸ್ಕೃತಿಯ ಬಗ್ಗೆ ಅಧ್ಯಯನ ಮಾಡಲು ಅಮೇರಿಕದಿಂದ ಬಂದಿದ್ದ ಮಿಸೆಸ್. ರೊಸೆನ್ ಅವರ ಪರಿಚಯ ನನ್ನ ಸ್ನೇಹಿತರ ಮನೆಯಲ್ಲಿ ಆಯಿತು.

ಆಕೆಯ ಚಟುವಟಿಕೆಗಳನ್ನು ಕೇಳಿ ನಾನು ಬೆರಗಾದೆ. ಮೂರು ಮಕ್ಕಳು, ಒಬ್ಬ ಗಂಡ ಇರೋದಲ್ಲದೇ 9 ರಿಂದ 5ರ ವರೆಗೆ ಒಂದು ಕೆಲಸ, ವೃದ್ಧಾಶ್ರಮದಲ್ಲಿ ಗೌರವಾರ್ಥ ಸೇವೆ, ಪ್ರಾಣಿದಯಾ ಸಂಘದ ಕಾರ್ಯದರ್ಶಿನಿ, Part time tennis coach ಇತ್ಯಾದಿ ನೂರೆಂಟು ಚಟುವಟಿಕೆಗಳಿಂದ ಆಕೆಯ ಜೀವನ ತುಂಬಿತ್ತು. ಈ ಮಧ್ಯೆ ಭಾರತೀಯ ಸಂಸ್ಕೃತಿಯ ಬಗ್ಗೆ ಅಧ್ಯಯನ ಬೇರೆ ಮಾಡಲು ಇಲ್ಲಿಗೆ ಬಂದಿದ್ದರು.

ಈಕೆಯ ಕಾರ್ಯ ಕಲಾಪಗಳನ್ನು ಕೇಳಿ ನನಗೆ ಆಶ್ಚರ್ಯವಾಯ್ತು. ನನಗೆ ಹೇಳಿಕೊಳ್ಳುವಷ್ಟು ಏನೂ ಕೆಲಸವಿಲ್ಲದಿದ್ದರೂ ಇರೋ ಎರಡು ಕೆಲಸ ಮಾಡಲು ಗೊಣಗಾಡಿಕೊಂಡು ವದ್ದಾಡ್ತೀನಿ. ಇದೇನು ಈಕೆ ಮಹಾತ್ಮೆ ತಿಳಿದುಕೊಳ್ಳಲೇ ಬೇಕು ಅಂತ ಆಕೆಯನ್ನೇ ಕೇಳಿದೆ.

''ನೀವು ಇಷ್ಟು ಕೆಲಸಗಳನ್ನು ಹೇಗೆ ನಿಭಾಯಿಸ್ತಿರಾ'' ಎಂದೆ. ಅದಕ್ಕೆ ಆಕೆ ''ಎಲ್ಲಾ ನಿಮ್ಮ ದೇಶದ ದಯೆಯಿಂದ. ನಾನು ದಿನಾ ಬೆಳಿಗ್ಗೆ ಯೋಗ, Meditation ಎಲ್ಲಾ ಮಾಡ್ತೀನಿ. Meditation ನನ್ನ ಜೀವನಕ್ಕೆ ಒಂದು ತಿರುವು ಕೊಟ್ಟಿದೆ '' ಎಂದೆಲ್ಲಾ ಬಣ್ಣ ಬಣ್ಣವಾಗಿ ವಿವರಿಸಿದರು.

ಇದಾದ ಕೆಲವು ದಿನಗಳ ನಂತರ ರಾಜು ಮಾವ ಯಾವುದೊ ಮದುವೆ ಮನೆಲಿ ಸಿಕ್ಕರು. ಆರು ತಿಂಗಳ ಹಿಂದೆ ಅವರಿಗೆ ಬೆನ್ನು ನೋವಿನ ತೊಂದರೆ ಇತ್ತು ಅಂತ ನನಗೆ ಗೊತ್ತಿತ್ತು. ''ಹೇಗಿದೀರಾ'' ಅಂತ ಕೇಳಿದೆ. ತಮ್ಮ ಬೆನ್ನು ನೋವು ಹೇಗೆ ಕಮ್ಮಿ ಆಯಿತು ಅಂತ ಒಂದು ಘಂಟೆ ಕಾಲ ದೀರ್ಘ ಭಾಷಣ ಕೊಟ್ಟರು. ಭುಜಂಗಾಸನ, ಶರಭಾಸನ, ಧನುರಾಸನ ಇತ್ಯಾದಿಗಳನ್ನು ಶುರುಮಾಡಿದ ಮೇಲೆ ಈಗ ಎಷ್ಟೊ ವಾಸಿ ಅಂದರು.

ಈ ಎರಡು ಘಟನೆಗಳಾದ ಮೇಲೆ ಒಂದು ದಿನ ನನ್ನ ಗೆಳತಿ ಶೀಲಾ ಮನೆಗೆ ಬಂದಿದ್ಲು. ಅದೂ ಇದೂ ಮಾತಾಡ್ತಾ 'ನನಗೆ ಆಗಾಗ ಮಂಡಿನೋವು, ಕೀಲು ನೋವು ಬರ್ತಿರತ್ತೆ, ಓಡಾಡೋದೆ ಕಷ್ಟ' ಅಂತ ನಾನಂದಾಗ, ಅವಳ ಆರು ವರ್ಷದ ಮಗಳು ''ಆಂಟಿ, ಯೋಗ ಮಾಡಿ, ಎಲ್ಲಾ ಸರಿಹೋಗುತ್ತೆ'' ಅಂದ್ಲು.

ಹೀಗೆ ಮಕ್ಕಳಿಂದ ಮುದುಕರವರೆಗೂ ಎಲ್ಲರ ಬಾಯಲ್ಲೂ ಯೋಗ ಮತ್ತು ಧ್ಯಾನದ ಮಹಾತ್ಮೆಯನ್ನು ಕೇಳಿದ ಮೇಲೆ ನಾನೂ ಇದಾವುದನ್ನಾದರೂ ಕಲಿಯಬೇಕು ಅಂತ ಅನ್ನಿಸ್ತು.

ನನ್ನ ಸ್ವಭಾವವೇ ಹಾಗೆ. ಯಾರು ಏನು ಮಾಡಿದ್ರೂ ಅದನ್ನ ನಾನೂ ಮಾಡಬೇಕು.

ಒಳಮನಸ್ಸಿನಲ್ಲಿ ಒಂದು ಆಸೆ. ಏನೋ ಇಷ್ಟು ದಿನ ತೀರ ಸಾಮಾನ್ಯ ಜೀವನ ನಡೆಸಿದ್ದೀನಿ. ಯಾರಿಗೆ ಗೊತ್ತು. ಈ Meditation ಯಿಂದ ನನ್ನ ಜೀವನಕ್ಕೂ ಒಂದು ತಿರುವು ಸಿಗಬಹುದು, ನೋಡೋಣ ಅನ್ನೋ ಕುತೂಹಲ ಬೇರೆ!

Meditation ಬಗ್ಗೆ ಆಲೋಚನೆ ಮಾಡುತ್ತಿದ್ದಾಗ ನಮ್ಮ ಚಿಕ್ಕಪ್ಪನ ಮಗ ಸುರೇಶ ಬಂದ. ಸುರೇಶ ಆತ್ಮವಿಶ್ವಾಸದ ಪ್ರತೀಕ. ಅವನಿಗೆ ತಿಳಿಯದೇ ಇರುವ ವಿಷಯವೇ ಇಲ್ಲ. ಯಾವ ಪ್ರಶ್ನೆಗೂ, ಸಮಸ್ಯೆಗೂ ಅವನಿಂದ ಧಿಡೀರ್ ಉತ್ತರ ಸಿಗುತ್ತೆ.

''ಸುರೇಶ, ಸುಮ್ಮನೆ ವಯಸ್ಸು ಆಗ್ತಾ ಇದೆ ಕಣೋ. ಏನೊ ಸ್ವಲ್ಪ Meditation ಮಾಡೊದಾದ್ರು ಕಲಿಯೋಣ ಅಂತ ಇದೀನಿ. ಹೇಳಿಕೊಡೋರು ಯಾರಾದ್ರು ನಿನಗೆ ಗೊತ್ತಾ'' ಅಂತ ಕೇಳಿದೆ.

''ಸರಿಯಾದ Time ನಲ್ಲಿ ನಿನಗೆ Meditation ಮಾಡುವ ಮನಸ್ಸು ಬಂದಿದೆ. ಈಗ ಬೆಂಗಳೂರಿಗೆ ಬಂದಿರುವ ಸುಯೋಗಾನಂದರನ್ನು ನೀನು ಕಾಣಲೇಬೇಕು ಅವರು ಪೂರ್ವಾಶ್ರಮದಲ್ಲಿ Medical Doctor ಆಗಿದ್ದರು. ನಂತರ ಬೇಕಾದಷ್ಟು ಸಮಾಜಸೇವೆ ಮಾಡಿ, ನಾನಾ ಧರ್ಮಗಳ ಅಧ್ಯಾಯನ ಮಾಡಿ, ಈಗ ಜನರಿಗೆ ಚಿರಶಾಂತಿ, ಸಮಾಧಾನ ಸಿಗೊ ರಹಸ್ಯವನ್ನು ಹೇಳಿಕೊಡಲಿಕ್ಕೆ ಶುರುಮಾಡಿದ್ದಾರೆ'' ಅಂತ ಹೇಳಿದ.

ಸರಿ, ನೋಡೋಣ ಅಂತ ಮಾರನೆ ದಿನ ಸುರೇಶನ ಜೊತೆ ಸುಯೋಗಾನಂದರನ್ನು ನೋಡಲು ಹೋದೆ. ಬಿಳಿ ಪೈಜಾಮ, ಬಿಳಿ Silk ಜುಬ್ಬ, ಕೊರಳಲ್ಲಿ ಚಿನ್ನದ ಚೈನನ್ನು ಧರಿಸಿದ್ದ ವ್ಯಕ್ತಿಯನ್ನು ಸುಯೋಗಾನಂದರೆಂದು ಸುರೇಶ ಪರಿಚಯ ಮಾಡಿಸಿಕೊಟ್ಟ. ಧ್ಯಾನ ಮಾಡುವ ರೀತಿಯನ್ನು ಕಲಿಯಲು ನಾನು ಬಂದಿದ್ದೇನೆಂದು ಆತನಿಗೆ ಹೇಳಿದೆ.

''ನೀವು ಧ್ಯಾನ ಮಾಡುವುದನ್ನು ಕಲಿಯಲು ಕಾರಣ ಏನು'' ಎಂದು ಸುಯೋಗಾನಂದರು ಕೇಳಿದರು.

''ಏನೊ ಸುಮ್ಮನೆ ಹಾಗೆ ಕಲಿಯೋಣ ಅಂತ ಅನ್ನಿಸ್ತು'' ಎಂದೆ.

''ಇಲ್ಲ, ಸುಪ್ತ ಮನಸ್ಸಿನ ಪ್ರೇರಣೆ ಇಲ್ಲದೆ Meditation ಕಡೆಗೆ ಮನಸ್ಸು ತಿರುಗದು. ಇರಲಿ, ನಾನು ಪ್ರಶ್ನೆಗಳನ್ನು ಕೇಳುತ್ತೇನೆ ಉತ್ತರದಿಂದ ನನಗೆ ನಿಮ್ಮ ಉದ್ದೇಶ ತಿಳಿಯುತ್ತದೆ'' ಎಂದು ಹೇಳಿ ಸುಯೋಗಾನಂದರು ಪ್ರಶ್ನೆಗಳನ್ನು ಕೇಳಲು ಶುರುಮಾಡಿದರು.

Doctor, case history ಯನ್ನು ತೆಗೆದುಕೊಳ್ಳುವ ಹಾಗೆ ಆತ ಪ್ರಶ್ನಿಸಿದರು.

''ಮದುವೆ ಆಗಿದೆಯೇ?''

''ಆಗಿದೆ''

''ಮಕ್ಕಳಿದ್ದಾರೆಯೆ?'' ''ಇದ್ದಾರೆ''

''ಚಿಕ್ಕವರೋ, ದೊಡ್ಡವರೋ''

''ಎಲ್ಲಾ ದೊಡ್ಡವರು, ಎಲ್ಲಾ ಸೆಟಲ್ ಆಗಿದ್ದಾರೆ''

''ಸ್ವಂತ ಮನೆ ಇದೆಯೆ?''

''ಸಣ್ಣ ಮನೆ ಇದೆ... ಆದರೂ ಸ್ವಂತದ್ದು''

''ಕೆಲಸ ಇದೆಯೇ?''

''ಇದೆ ಶಾಲೆಯಲ್ಲಿ ಪಾರ್ಟ್ ಟೈಂ ಉಪಾಧ್ಯಾಯಿನಿ''

''ಶಾಲೆಯಲ್ಲಿ ಕಿರುಕುಳ ಇದೆಯೇ?''

''ಇಲ್ಲ''

''ಆರೋಗ್ಯ ಹೇಗಿದೆ''

''ಸಧ್ಯಕ್ಕೆ ಚೆನ್ನಾಗಿದೆ, ಹೇಳಿಕೊಳ್ಳುವಂತಹ ಯಾವ ರೋಗವೂ ಇಲ್ಲ''

''ನಿಮಗೆ ತಿಳಿದಿರುವಂತೆ ನಿಮ್ಮ Problem ಏನು? ""Problem ಅಂತ ಏನೂ ಇಲ್ಲ. ಆದರೆ ಎಲ್ಲರೂ ಮಾಡಿದ್ದನ್ನು ಮಾಡುವ ಸ್ವಭಾವ. ಹಾಗಾಗಿ ಏನೇನೋ ಮಾಡ್ತಾ ಇರ್ತೀನಿ''

''ಪರವಾಗಿಲ್ಲ, ನಿಮ್ಮದು Typical Case ಇದು ಆಧ್ಯಾತ್ಮಕ್ಕೆ ಸಂಬಂಧಪಟ್ಟ ಸಮಸ್ಯೆ. ದೇಹ, ಮನಸ್ಸು ಸರಿಯಾಗಿದೆ. ಆಧ್ಯಾತ್ಮಿಕತೆಯ ಕೊರತೆ ಇದೆ. ಆನಂದವನ್ನು ಪಡೆಯಲು ಏನೇನೊ ಕೆಲಸಗಳನ್ನು ಮಾಡುತ್ತಿದ್ದೀರಿ. ಅದರಿಂದ ಏನೂ ಲಾಭವಾಗಿಲ್ಲ. ಆನಂದ ಸಿಗುವುದಿಲ್ಲ. ಮುಖ್ಯವಾಗಿ ನಿಮ್ಮ ಜೀವಾತ್ಮ ದೇಹದ ಬಂಧನದಿಂದ ಕಳಚಿಕೊಳ್ಳಲು ಚಡಪಡಿಸುತ್ತಿದೆ.''

''ಅಯ್ಯೋ, ಅಂದ್ರೆ ನಾನು ಸತ್ತುಹೋಗುತ್ತೇನೆಯೇ'' ಅಂದೆ

''ಛೆ, ಹಾಗಲ್ಲ, ಶರೀರವಿರುವಾಗಲೇ ಆತ್ಮದ ದರ್ಶನ ನಿಮಗಾದರೆ, ದೇಹಬಂಧನ ಹೋದಂತೆ''

''ಅಂದರೆ ಬದುಕಿದ್ದರೂ ಸತ್ತ ಹಾಗೇ'' ಎಂದು ನನ್ನ ಅವಿವೇಕವನ್ನು ಪ್ರದರ್ಶಿಸಿದೆ.

''ನಿಮಗದು ಅರ್ಥವಾಗದು, ಪರವಾಗಿಲ್ಲ ಬಿಡಿ. ಒಟ್ಟಿನಲ್ಲಿ ನಿಮಗೆ ಆಧ್ಯಾತ್ಮಿಕ ತೃಪ್ತಿ ಸಾಲದು. ಆ ಕಾರಣ ಜೀವಾತ್ಮ ತನ್ನ ಪ್ರಕಾಶವನ್ನು ಬೀರಲು ಹಾತೊರೆಯುತ್ತಿದೆ, ಏಕಾಗ್ರತೆಯನ್ನು ಅಭ್ಯಸಿಸಿದರೆ ಅಂದರೆ, ಧ್ಯಾನ ಮಾಡಿದರೆ ಜೀವಾತ್ಮ, ಪರಮಾತ್ಮ ಒಂದಾಗಿ, ಮಹದಾನಂದ ಸಾಗರದಲ್ಲಿ ತೇಲಾಡುತ್ತೀರಿ. ಆಗ ಯಾವ ಕೆಲಸವೂ ಬೇಕಾಗಿಲ್ಲ. ಕೂತಲ್ಲೇ ಶಾಂತಿ ಸಮಾಧಾನ ತಾಂಡವವಾಡುತ್ತದೆ'' ಎಂದರು.

''ಹಾಗಾದ್ರೆ ಏನು ಮಾಡಬೇಕು'' ಎಂದೆ

''ನಾಳೆಯಿಂದ ಧ್ಯಾನ ಅಂದರೆ Meditation ಮಾಡಿ, ನಾನು ವಿಧಾನವನ್ನು ಹೇಳಿಕೊಡುತ್ತೇನೆ'' ಎಂದರು. ಧ್ಯಾನ ಮಾಡುವ ಬಗ್ಗೆ ವಿವರವಾಗಿ ತಿಳಿಯಪಡಿಸಿದರು.

ಆಯ್ತು, ಮನೆಗೆ ಬಂದೆ. ಮಾರನೆ ದಿನ Meditationಗೆ ಕೂತೆ. ಉಸಿರಾಟದ ಮೇಲೆ ಗಮನವಿಟ್ಟು ಓಂ ಕಾರವನ್ನು ಜಪಿಸಲಿಕ್ಕೆ ಶುರುಮಾಡಿದೆ. ಉಸಿರಾಟದ ಮೇಲೆ ಗಮನ ಇದ್ದೇ ಇತ್ತು. ಪರವಾಗಿಲ್ಲ, ಏನೂ ಯೋಚನೆ ಬಂದಿಲ್ಲ, ಎನ್ನುವ ಯೋಚನೆ ಮೊದಲು ಬಂತು. ಹೀಗೆ ಮುಂದುವರೆದರೆ ಮುಕ್ತಿಯೂ ದೊರಕಬಹುದು ಈ ಜನ್ಮದಲ್ಲೇ ಎನ್ನಿಸಿತು. ಮುಕ್ತಿ ಎಂದಾಗ ಈಚೆಗೆ ನಮ್ಮ ಮನೆಯಲ್ಲಿ ಕೆಲಸಕ್ಕಿದ್ದ ಮುಕ್ತಾಬಾಯಿಯ ಜ್ಞಾಪಕ ಬಂತು. ನನ್ನ ಮಗಳು, ಎರಡನೆ ಮಗುವಿನ ಬಾಣಂತನಕ್ಕೆ ಬಂದಿದ್ದಳು. ದೊಡ್ಡದ್ದಕ್ಕೆ 2 ವರ್ಷ ಮಗುವನ್ನು ನೋಡಿಕೊಳ್ಳುವುದಕ್ಕೆ ಹಾಗೂ ಮನೆ ಕೆಲಸದ ಸಹಾಯಕ್ಕೆ ಮಂಗಳೂರಿನ ಕಡೆಯ ಮುಕ್ತಾಬಾಯಿ ಸಿಕ್ಕಿದ್ರು. ಮೊದಲನೆ ದಿನ ಆಕೆ ಮಗುವನ್ನು ಆಡಿಸಿಕೊಳ್ಳುತ್ತಿದ್ದ ರೂಮಿಗೆ ಹೋದೆ. ಮುಕ್ತಾಬಾಯಿ ಕರಡಿ, ಕೋತಿ, ನಾಯಿ, Barbie ಬೊಂಬೆ ಇತ್ಯಾದಿ ಎಲ್ಲಾ ಬೊಂಬೆಗಳನ್ನೂ ಹಾಸಿಗೆ ಮೇಲೆ ಸಾಲಾಗಿ ಮಲಗಿಸಿದ್ದಳು. ನನ್ನನ್ನು ಕಂಡು ಸೀರಿಯಸ್ಸಾಗಿ ಆಗಿ ''ನೋಡಿ ಕರಡಿ, ಮಂಗ, ನಾಯಿ ಎಲ್ಲಾ ಮಲಗಿಯಾಯಿತು. ಪಾಪು ಮಾತ್ರ ಮಲಗಿಲ್ಲ ಅವಳು ತುಂಟಿ ಸರಿಯಾ'' ಎಂದಳು. ಆಕೆಯ ವರ್ತನೆಯನ್ನು ನೋಡಿ ನನಗೆ ಏನೊ ಒಂದು ತರಹ ಅನುಮಾನವಾಯಿತು. ಮಾರನೆ ದಿನ ಕುಕ್ಕರ್ ಇಟ್ಟು, 15 ನಿಮಿಷ ಆದ ಮೇಲೆ ಗ್ಯಾಸ್ ಆರಿಸಲಿಕ್ಕೆ ಆಕೆಗೆ ಹೇಳಿ ಅಡುಗೆ ಮನೆಯಿಂದ ಹೊರಗೆ ಬಂದೆ. ಒಂದು ನಿಮಿಷ ಆದ ನಂತರ ಮುಕ್ತಾಬಾಯಿ ಹೊರಗೆ ಬಂದು ''ಕುಕ್ಕರ್ ಆರಿಸಿಯಾಯಿತು'' ಅಂದಳು. ''ಅಯ್ಯೋ ಇನ್ನೂ Time ಆಗಿಲ್ಲವಲ್ಲ'' ಎಂದೆ. ಕಂಕುಳಲ್ಲಿದ್ದ ಪಾಪುವನ್ನು ತೋರಿಸುತ್ತಾ ''ನಾನು ಪಾಪುನ ಕೇಳಿದೆ, ಕುಕ್ಕರ್ ಆರಿಸಲಾ ಅಂತ. ಅವಳು ತಲೆ ಅಲ್ಲಾಡಿಸಿದಳು. ಅದಕ್ಕೆ ಆರಿಸಿದೆ'' ಅಂತ ಅಂದ್ಲು. ಗ್ಯಾರಂಟಿ ಈಕೆಗೆ ಬುದ್ಧಿ ಸ್ಥಿಮಿತದಲ್ಲಿಲ್ಲ ಅಂತ ಖಚಿತವಾಗಿ, ಅಂದೇ ಆಕೆಯನ್ನು ಕಳುಹಿಸಿಕೊಟ್ಟೆ.

ಆಯ್ಯೊ ರಾಮ! ನಾನು ಏನೇನೋ ಯೋಚಿಸ್ತಾ ಇದೀನಿ. ಮನಸ್ಸು ಎಲ್ಲೆಲ್ಲೊ ಓಡಿದೆ. ಪುನಃ ಗಮನವನ್ನು ಉಸಿರಾಟದ ಮೇಲೆ ತಂದು ಓಂ ಕಾರವನ್ನು ಶುರುಮಾಡಿದೆ. ಓಂ, ಓಂ, ಓಂ, ಎಂಥ ಸುಮಧುರವಾದ ಶಬ್ದ. ಬರಿ ಓಂ ಅಂತ ಯಾರೂ ಹೆಸರಿಟ್ಟುಕೊಂಡಿರುವುದನ್ನು ನಾನು ನೋಡಿಲ್ಲ. ನನ್ನ ತಮ್ಮನ ಹೆಸರು ಓಂ ಪ್ರಕಾಶ್ ಅವನು ಡಾಕ್ಟರು. ಹಿಂದೆ ಅಮೇರಿಕದ ಒಂದು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ. ಒಂದು ದಿನ ಅವನ American Patient ಒಬ್ಬರು ಆಸ್ಪತ್ರೆಗೆ ಬಂದು ಅವನನ್ನು ನೋಡಬೇಕಾಯಿತಂತೆ. ಈ ಅಮೇರಿಕನ್ನರಿಗೆ ನಮ್ಮ ಭಾರತೀಯರು ಹೆಸರುಗಳನ್ನು ಉಚ್ಚರಿಸುವುದು ಒಂದು ದೊಡ್ಡ ಸಮಸ್ಯೆ. ಆಕೆ Receptionist ಹತ್ತಿರ ಬಂದು ""I want to meet the Indian Doctor" ಅಂದರಂತೆ. ಅದಕ್ಕೆ Receptionist ""There are many Indian Doctors, what is his name please" ಅಂದಾಗ ಆ Patient ""I m sorry, but I don't remember his name, but it sounds like ""O my gosh" ಎಂದರಂತೆ. ಆಗ Receptionist ಗೆ ಅದು Om Prakash ಇರಬೇಕು ಅಂತ ಗೊತ್ತಾಯಿತಂತೆ.

ಶ್ರೀ ರಾಮ ರಕ್ಷೆ! ನಿಜವಾಗಿಯೂ ಈ ಮನಸ್ಸು ತುಂಟ ಹುಡುಗನ ಹಾಗೆ. ಬೈದು ಪ್ರಯೋಜನವಿಲ್ಲ. ನಯವಾಗಿ ಅದನ್ನು ದಾರಿಗೆ ತರಬೇಕು ಅಂದುಕೊಂಡೆ. ಪುನಃ ಓಂ ಕಾರವನ್ನು ಪ್ರಾರಂಭಿಸಿದೆ. ಐದಾರು ಸಲ ಓಂ ಕಾರವನ್ನು ಜಪಿಸಿದ ಮೇಲೆ ಮಧ್ಯಾಹ್ನ ಓಂ ಪುಡಿ ಮಾಡಕ್ಕೆ ಕಡಲೆ ಹಿಟ್ಟು ತರಬೇಕು ಎಂದು ಜ್ಞಾಪಕ ಬಂತು.

ಥೆ! ಇದೇನು ಹುಡುಗಾಟ. 2 ಸೆಕೆಂಡ್ ಏಕಾಗ್ರತೆ ಇದ್ದರೆ 5 ನಿಮಿಷ ಯಾವು ಯಾವುದೋ ಅಸಂಬದ್ಧದ ಘಟನೆಗಳ ಸ್ಮರಣೆ. ಈ ಸ್ವಚ್ಛ ಮನಸ್ಸನ್ನು ಹದ್ದುಬಸ್ತಿಗೆ ತರಲು ಒಂದು ಉಪಾಯ ಹೊಳೆಯಿತು. ಸುಮ್ಮನಿರಲು ಹೇಳಿದರೆ ಮನಸ್ಸು ಊರೆಲ್ಲ ಸುತ್ತಿ, ಬೇಡದ ವಿಷಯಗಳನ್ನೆಲ್ಲಾ ಜ್ಞಾಪಿಸುತ್ತೆ. ನಾಳೆ ಧ್ಯಾನಕ್ಕೆ ಕೂತಾಗ ಮನಸ್ಸಿಗೆ ''ನಿನಗೆ ತಿಳಿದಿರುವುದನ್ನೆಲ್ಲಾ ಜ್ಞಾಪಿಸಿಕೊ ಎಂದು ಆರ್ಡ್‌ರ್ ಮಾಡ್ತೀನಿ. ಆಗ ಅದಕ್ಕೆ ಎಲ್ಲಿ ಶುರುಮಾಡೋದು ಅಂತ ತಿಳಿಯದೆ ತೆಪ್ಪಗೆ ಉಸಿರಾಟದ ಮೇಲೆ ಗಮನ ಇಡುತ್ತೊ ಏನೊ ನೋಡೋಣ!



''ಟ್ಯಾಕ್ಟ್‌ಫುಲ್ಲಾಗಿ ಬೌಲ್ ಮಾಡ್ತೀಯಾ ತಾನೆ!''

ಯಾರು ಯಾರಿಗೆ ಹೇಳಿದರು?

ಆರತಿ

1. ''ಈಗ ದೇಶದಲ್ಲಿ ರಾಜನಿಲ್ಲ. ಆದ್ದರಿಂದ ಆಗಬೇಕಾದ್ದು ಕೂಡಲೇ ಆಗಲಿ''
    1. ಗಿಲ್, ಕೃಷ್ಣಮೂರ್ತಿಗೆ, ಚುನಾವಣಾ ಆಯೋಗದಲ್ಲಿ
    2. ಕ್ಲಿಂಟನ್, ಸಿ.ಐ.ಎ. ಮುಖ್ಯಸ್ಥನಿಗೆ, ಪಾಕೀಸ್ತಾನವನ್ನು ಕುರಿತು
    3. ರಾಣಿ ಸತ್ಯವತಿ ವ್ಯಾಸನಿಗೆ

2. ''ಒಂದು ಹಿಡಿ ಧರ್ಭೆಯನ್ನು ಎತ್ತಿಕೊಂಡುಬನ್ನಿ''
    1. ಕತ್ತೆ, ಧೋಬಿಗೆ
    2. ರಾಮರ್ ಪಿಳ್ಳೆ - ವಿಜ್ಞಾನಿಗಳಿಗೆ
    3. ಗುರು ದ್ರೋಣಾಚಾರ್ಯರು, ರಾಜಕುಮಾರರಿಗೆ

3. ಅಲ್ಲಿಗೆ ಕಣ್ಣು ಹೋಗುವುದಿಲ್ಲ, ವಾಕ್ಕು ಹೋಗುವುದಿಲ್ಲ, ಮನಸ್ಸು ಹೋಗುವುದಿಲ್ಲ
    1. ಪಾರ್ಲಿಮೆಂಟ್ ಭವನ ಕುರಿತು ಸ್ಪೀಕರ್ ಸಾಂಗ್ಮಾ
    2. ರಾಜಕಾರಣಿಯ ದುರ್ಗಮ ತಲೆ ಕುರಿತು ಪತ್ರಕರ್ತ
    3. ಕೇನದಲ್ಲಿ ಉಪನಿಷತ್ಕಾರ

4. ''ಇದು ಉರುವಲ ಮನೆ - ಈ ಮನೆಯ ಸ್ವರೂಪ ಗೊತ್ತಾಯಿತು''
    1. ಸಂಯುಕ್ತ ರಂಗ ಸರ್ಕಾರ ಕುರಿತು ದೇವೇಗೌಡರು
    2. ಬಿ.ಸಿ.ಸಿ. ಕ್ವಾರ್ಟಸ್ ಕುರಿತು ಬಿ.ಸಿ.ಸಿ. ನೌಕರರು
    3. ಧರ್ಮರಾಯ, ಅರಗಿನ ಮನೆಯನ್ನು ನೋಡಿ, ಭೀಮನಿಗೆ

5. ''ಏಕೆ ಅರಚುತ್ತೀಯೆ? ನಿನ್ನ ಜಂಭ ಅಲ್ಲಿರಲಿ''
    1. ಪು.ಲ. ದೇಶಪಾಂಡೆ - ಬಾಳ್ ಠಾಕ್ರೆಗೆ
    2. ಜಯಲಲಿತಾ - ಸುಬ್ರಮಣ್ಯಂ ಸ್ವಾಮಿಗೆ
    3. ಭೀಮ ಹಿಡಿಂಬನಿಗೆ

6. ಮಹನೀಯರೇ, ನಾವು ನಿಮ್ಮನ್ನು ಯಾರೆಂದು ತಿಳಿಯೋಣ?
    1. ಜಾರ್ಖಂಡ್ ಮುಕ್ತಿ ಮೋರ್ಚಾ ಎಂ.ಪಿ.ಗಳನ್ನು ಕುರಿತು ಸ್ಪೀಕರ್ ಸಾಂಗ್ಮಾ
    2. ಬಂಗಾರಪ್ಪ ಮತ್ತು ಸಂಗಡಿಗರನ್ನು ಕುರಿತು ಆಪ್ ಜನತೆ
    3. ದ್ರುಪದ - ಪಾಂಡವರನ್ನು ಕುರಿತು

7. ''ನಮ್ಮ ಮೂವರಲ್ಲಿ ಯಾರಮೇಲೆ ಯುದ್ಧ ಮಾಡುತ್ತೀಯೆ?''
    1. ಜೋಷಿ, ಠಾಕ್ರೆ, ಅಡ್ವಾಣಿ - ಅಣ್ಣಾ ಹಜಾರೆಗೆ
    2. ಲಲ್ಲೂ, ದೇವೇಗೌಡ, ಇಬ್ರಾಹಿಂ - ಮುಖ್ಯ ನ್ಯಾಯಾಧೀಶರಿಗೆ
    3. ದೇಶ್‌ಪಾಂಡೆ, ಅನಂತ್‌ನಾಗ್, ಪಟೇಲ್ - ಕುಮಾರಸ್ವಾಮಿಗೆ
    4. ಕೃಷ್ಣ, ಭೀಮ ಅರ್ಜುನ - ಜರಾಸಂಧನಿಗೆ

8. ''ಅಯ್ಯೋ ಕೆಟ್ಟೆನಲ್ಲಾ'' ಎಂದು ಕೂಗಿದಳು
    1. ಫೂಲನ್‌ದೇವಿ - ಜಾಮೀನು ಸಿಗದಿದ್ದಾಗ
    2. ಜಯಲಲಿತಾ - ಸೆರೆಮನೆಗೆ ಹೋಗುವಾಗ
    3. ದಮಯಂತಿ - ನಳ ತನ್ನನ್ನು ಬಿಟ್ಟುಹೋದುದನ್ನು ಗಮನಿಸಿದಾಗ

'ಈ ಸೈಕಿಯಾಟ್ರಿಕ್ ಟ್ರೀಟ್‌ಮೆಂಟ್‌ನಿಂದ ನಿಮಗೆ ಏನೂ ಪ್ರಯೋಜನಾನೇ ಆಗಿಲ್ಲಾಂದ್ರೆ, ಮುಂದೇನುಗತಿ ಅಂತೀನಿ'

'ಯಾಕಾಗಿಲ್ಲ, ಪ್ರಯೋಜನ ಆಗೇ ಇದೆ. ಒಂದು ವರ್ಷ ಹಿಂದೆ, ಟ್ರೀಟ್‌ಮೆಂಟ್ ಶುರುಮಾಡೋಕೆ ಮೊದಲು, ಟೆಲಿಫೋನ್ ಗಂಟೆ ಬಾರಿಸಿದ್ರೂ, ನಾನೂ ಅದನ್ನ ಮುಟ್ತಾ ಇರಲಿಲ್ಲ. ಈಗ ಅದು ಗಂಟೆ ಬಾರಿಸಲಿ, ಬಿಡಲಿ, ಎತ್ಕೊಂಡು ಮಾತಾಡ್ತೀನೋ ಇಲ್ವೊ?'

ಶೇಷಣ್ಣರು ಮತ್ತು ರ್‍ಝೋಪ್ಡಿ ಗ್ರ್ಯಾಂಟ್ಯೂ

ಡಾ. ಕೆ.ಜಿ.ಜಿ. ಮೂರ್ತಿ

ಶೇಷಣ್ಣರ ಬಹು ಉಪಯೋಗಿ ಮತದಾರರ ಗುರುತಿನ ಚೀಟಿ ಬಗ್ಗೆ ಕ್ಲಬ್‌ನಲ್ಲಿ ಚರ್ಚೆ ನಡೆದ ದಿನಗಳವು. ಶೀನಿ ಹೊಸದೊಂದು ಉಪಯೋಗ ಹೇಳಿದ.

ಅಪರೂಪಕ್ಕೆ ತಹಸಿಲ್ದಾರ್ ರಾಮಪ್ಪ ಆಫೀಸ್‌ಗೆ ಬಂದಾಗ ಹಣಕಾಸು ಸೆಕ್ಷನ್‌ನಲ್ಲಿ ಗದ್ದಲ ನಡೆದಿತ್ತಂತೆ. ಕ್ಲಾರ್ಕ್ ಬಸಪ್ಪ ಯಾರಿಗೋ ''ಮತ್ತೆ ಹಣ ಕೊಡಬರುವುದಿಲ್ಲ'' ಎಂದು ಬೇಡಿಕೊಳ್ಳುತ್ತಿದ್ದನಂತೆ. ''ಏಕೆ ಕೊಡ ಬರುವುದಿಲ್ಲ, ಹಿಂದೆ ಕೊಟ್ಟಿದ್ದಿರಲ್ಲ'' - ಎಂದು ಹಣ ಕೇಳಿ ಬಂದವ ದಬಾಯಿಸುತ್ತಿದ್ದನಂತೆ; ಅದರಲ್ಲೂ ಇಂಗ್ಲೀಷ್‌ನಲ್ಲಿ. ಕರೆದು ವಿಷಯವೇನೆಂದು ಕೇಳಿದಾಗ, ಬೆಂಕಿ, ಮಳೆ, ಗಾಳಿ, ಕಳ್ಳರು, ಮುಂತಾದವುಗಳಿಂದ ರಕ್ಷಣೆ ಪಡೆಯಲು ಭದ್ರವಾದ ಮನೆಕಟ್ಟಿಕೊಳ್ಳಲು ಸರಕಾರ ಗುಡಿಸಲು ವಾಸಿಗಳಿಗೆ ಮರುಪಾವತಿ ಇಲ್ಲದ 25 ಸಾವಿರ ರುಪಾಯಿ ಹಣದ ಸಹಾಯ ನೀಡುವುದು ತಿಳಿದು, ನನಗೆ ಗ್ರ್ಯಾಂಟ್ ಮಾಡಿ ಎಂದು ಬಂದಿದ್ದಾರೆ. ಜೊತೆಗೆ ಮತದಾರರ ಗುರುತಿನ ಚೀಟಿ ತಂದಿದ್ದಾರೆ.

''ಗುಡಿಸಲುವಾಸಿ ಫಲಾನುಭವಿಯೊಬ್ಬ, ಬಡತನದ ರೇಖೆಯಿಂದ ಬಡವರನ್ನು ಮೇಲೆತ್ತುವ ಸರಕಾರದ ಕಾರ್ಯಕ್ರಮದಿಂದ ಸ್ವಯಂ ಪ್ರೇರಿತನಾಗಿ, ಸರಿಯಾದ ದಾಖಲೆ ಹಿಡಿದು ಆಫೀಸ್ ಬಾಗಿಲಿಗೆ ಬಂದಿದ್ದಾನೆ. ಅವನಿಗೆ ಹಣ ನೀಡಲು ತೊಂದರೆ ಏನು'' - ಎಂದು ಗುಡುಗಿದರಂತೆ ರಾಮಪ್ಪ. ಅವರ ಸಿಟ್ಟಿಗೆ ಹೆದರದೆ ವಿವರಿಸಿದನಂತೆ ಬಸಪ್ಪ.

''ಸಾರ್ ಇವರಿಗೆ ಈಗಾಗಲೇ ಒಮ್ಮೆ ಹಣ ನೀಡಿ ತಪ್ಪುಮಾಡಿದ್ದೇವೆ. ಮತ್ತೊಮ್ಮೆ ಕೊಟ್ಟರೆ ಮುಂದೆ ಇದೊಂದು ಸ್ಕ್ಯಾಂಗೆ ದಾರಿಯಾಗಬಹುದು'' - ಎಂದರಂತೆ.

''ಸ್ಕ್ಯಾಂ ಎಂದ ಕೂಡಲೇ ನಡುಗಿದ ಸಾಹೇಬರು ಕ್ಲಾರ್ಕ್ ಬಸಪ್ಪನನ್ನು ಕೂಡುವಂತೆ ಹೇಳಿ, ಮನೆಯಿಂದ ತಂದ ಕಾಫಿಯನ್ನೂ ಕುಡಿಸಿ, ವಿಷಯವೇನೆಂದು ಕೇಳಿದಾಗ.

''ಸರ್, ಈ ವ್ಯಕ್ತಿಯ ಗುರುತಿನ ಚೀಟಿಯಲ್ಲಿ ಅವರ ಕಾಟೇಜ್ ನಮೂನೆಯ ಮನೆಯ ವಿಳಾಸ ಬರೆಯುವಾಗ ''ಹಟ್'' ಎಂದು ಬರೆದಿದ್ದೇವೆ. ಇದನ್ನು ಕನ್ನಡಿಸುವಾಗ ನಮ್ಮ ಕಲಾಮಂ ಸಹೇಬರು ''ರ್‍ಝೋಪ್ಡಿ'' ಎಂದು ಮಾಡಿದ್ದಾರೆ. ನಮ್ಮ ಮನೆ ''ರ್‍ಝೋಪ್ಡಿ'' ಅಲ್ಲ ''ಕಾಟೇಜ್'' ಇದರಂತೆ ಬದಲಾಯಿಸಿಕೊಡಿ ಎಂದು ಬಂದಿದ್ದರು. ಒಮ್ಮೆ ಮತದಾರರ ಚೀಟಿಯಲ್ಲಿ ನಮೂದಿಸಿದ ಮೇಲೆ ಬದಲಾಯಿಸ ಬರುವುದಿಲ್ಲ, ನೀವು ಬೇಕಾದರೆ ಅದರ ಉಪಯೋಗ ಪಡೆಯಬಹುದು - ಎಂದು ಹೇಳಿ

ಅವರ ಅದೃಷ್ಟಕ್ಕೆ ಅಭಿನಂದಿಸಿ, ಈ ಗುರುತಿನ ಚೀಟಿ ಆಧಾರದ ಮೇಲೆ ನೀವು ಮರುಪಾವತಿ ಮಾಡದಂತಹ 25 ಸಾವಿರ ರೂಪಾಯಿಗಳ ಗ್ರಾಂಟನ್ನು ಮನೆ ಕಟ್ಟಲು ಪಡೆಯಬಹುದೆಂದು ತಿಳಿಯ ಹೇಳಿ, ಒಪ್ಪಿಸಿ ಸೂಕ್ತ ದಾಖಲೆ ಸೃಷ್ಟಿಸಿ, ಹಣವನ್ನು ಅವರು ಮತ್ತು ನಾವು ಹಂಚಿಕೊಂಡಿದ್ದೆವು. ಈಗ ಮತ್ತೆ ಬಂದಿದ್ದಾರೆ. ''ಏನ್ರೀ ಇದು ಹಣ ಹಂಚಿಕೊಂಡ ಬಗ್ಗೆ ನನಗೆ ಹೇಳೇ ಇಲ್ಲ. ಇರಲಿ, ಹಣ ಹಂಚಿಕೊಂಡ ಮೇಲೆ ಮತ್ತೇನಂತೆ ತರ್ಲೆ'' ಅದಕ್ಕೆ ಬಸಪ್ಪ,

''ಸರ್ ಈಗ ಅವರು ತಮ್ಮ ಹೆಂಡತಿಯ ಗುರುತಿನ ಚೀಟಿ ತಂದಿದ್ದಾರೆ''

ಟ್ರಾಫಿಕ್

ನಂ ಊರಿನಲ್ಲಿ ಡ್ರೈವ್ ಮಾಡಲು
ಅಗತ್ಯ ಈ ಮೂರೆ ಗುಣಗಳು;
ಸಿಂಹದೆದೆ, ಹದ್ದಿನ ಕಣ್
ಮತ್ತು ದೇವರಲ್ಲಿ ಅಪಾರ ನಂಬಿಕೆ!

- ವಿಕಟಕವಿ



''ಸೌಂದರ್ಯ ಸ್ಪರ್ಧೆಲಿ ಕೇಳೋ ಪ್ರಶ್ನೆಗಳಿಗೆ ಎಲ್ಲೂ ಉತ್ರಾನೇ ಸಿಗಲಿಲ್ವಲ್ಲಾ!''

ಆಸನದಲ್ಲಿ ನಮ್ಮಮ್ಮ ಕನ್ನಡಮ್ಮ!

ಶಿವರಾಮ ಕಾರಂತ

ಬೆಳಗೊಳದ ಸನಿಯಕ್ಕೆ ಇಹಳು ತಮ್ಮ
ಅಲ್ಲಿ ನಿಂತರೆ ಹಿರಿಯ ಗೊಮ್ಮಟನ ಮೂರ್ತಿ
ಬರದಿಹುದೆ ಆಕೆಗೂ ಸಕಲ ಸ್ಫೂರ್ತಿ!
ಈ ಬಾರಿ ಉತ್ಸವದಿ ಕಂಠಪೂರ್ತಿ
ಪಡೆದೆ ಪಡೆಯಿತು ನೋಡಿ ನವ್ಯ ಕೀರ್ತಿ!
ವಂದೆ ಮಾತರಮು ಎತ್ತಿದಾ ಸೊಲ್ಲು
'ಕೋಟಿ ಕೋಟಿ ಕಂಠ ನಿನಾದ ಕರಾಲೇ'
ಕನ್ನಡಮ್ಮನ ಕೊರಲು ಆಯ್ತು ರಣಕಹಳೆ
ಲಕ್ಷಗಟ್ಟಲೆ ವೆಚ್ಚ, ಕೋಟಿಗಿಂತ ಕಡಿಮೆ
ಮುಂದಕ್ಕೆ ಮೀರಲಿದೆ - ಅಮ್ಮನಾ ಮಹಿಮೆ
ಆಡಳಿತೆ ಸಡಿಲಾರ್ದ ಚಿಂತೆ ಬೇಡ-
ನಮ್ಮಮ್ಮ ಕನ್ನಡಿತಿ-ಪ್ರಾಂತಕ್ಕೆ ಒಡತಿ
ವೆಚ್ಚಕ್ಕೆ ಅಳುಕದಿಹ ಗುಣವೆ ಮಹತಿ!
ಜಯ ಜಯ ಜಯ ಜಯ ಹೆಮ್ಮಾತೆ
ಭಾರತ ರಾಷ್ಟ್ರದಿ ಮೆರೆ ವಿಖ್ಯಾತೆ!

ದನ ತಿಂದ ಚೆಕ್ಕು

ಕು.ಗೋ

ಪಿಯೋನ್ ದೂಮಣ್ಣ ಪೋಸ್ಟ್ ಆಫೀಸಿಗೆ ಹೊರಟ. ಡಿಸ್ಪಾರ್ಜ್ ಸೆಕ್ಷನ್‌ನಿನ ಕ್ಲರ್ಕ್ ಸಿದ್ದಪಡಿಸಿಕೊಟ್ಟ ರಿಜಿಸ್ಟರ್ ಕವರ್‌ಗಳನ್ನೆಲ್ಲ ಒಂದು ರಬ್ಬರ್ ಬ್ಯಾಂಡಿನಲ್ಲಿ ಒಗ್ಗೂಡಿಸಿ ಸೈಕಲ್ ಕ್ಯಾರಿಯರ್‌ನಲ್ಲಿ ಇಟ್ಟು, ಮರೆತುಹೋಗಿದ್ದ ಮತ್ತೊಂದು ಕಟ್ಟನ್ನು ತರಲು ಒಳಗೆ ಹೋದ. ಹಾಗೇ ಅವರಿವರ ಹತ್ತಿರ ಸ್ವಲ್ಪ ಮಾತನಾಡುತ್ತಾ ನಿಂತ. ಹೊರಗೆ ಬಂದು ನೋಡುವಾಗ ಸೈಕಲ್ ಕ್ಯಾರಿಯರ್‌ನಲ್ಲಿದ್ದ ಕಟ್ಟು ಅಲ್ಲಿರಲಿಲ್ಲ. ಅಚೀಚೆ ನೋಡಿದ. ದನವೊಂದು ಆ ಕಟ್ಟನ್ನು ಎಳೆದು ಸ್ವಲ್ಪ ದೂರ ಹೋಗಿ ಗಬಗಬನೆ ತಿನ್ನುತ್ತಿದ್ದದ್ದು ಕಂಡಿತು. ದನದ ಬಳಿಗೆ ಓಡಿದ. ಎಲ್ಲಾ ಕವರ್‌ಗಳೂ ದನದ ಬಾಯಿಗೆ ಹೋಗಿಯಾಗಿತ್ತು. ಒಂದೆರಡು ಕವರಿನ ಚೂರು ಮಾತ್ರಾ ಕೈಗೆ ಸಿಕ್ಕಿತು. ಕವರಿನ ಒಳಗಿದ್ದ ಕಾಗದ ಪತ್ರಗಳೆಲ್ಲಾ ದನದ ಹೊಟ್ಟೆಗೆ ಹೋಗಿಯಾಗಿತ್ತು. ಸಿಟ್ಟಿನಲ್ಲಿ ದನಕ್ಕೆ ಹೊಡೆದ. ಸೆಗಣಿ ಹಾಕಿ ದನ ಓಡಿ ಹೋಯಿತು. ದೂಮಣ್ಣ ಸಿಕ್ಕಿದ ಚೂರನ್ನು ಹಿಡಿದು ಡಿಸ್ಪಾರ್ಜ್ ಸೆಕ್ಷನ್ನಿನ ಕ್ಲರ್ಕ್ ಹತ್ತಿರ ಹೋದ.

ಆದದ್ದಿಷ್ಟೆ. ಬಾಂಬ್ ಬೀಳಲಿಲ್ಲ. ವಿಮಾನ ಪಲ್ಟಿ ಹೊಡೆಯಲಿಲ್ಲ. ರೈಲು ಢಿಕ್ಕಿ ಹೊಡೆಯಲಿಲ್ಲ. ಬಸ್ಸು ಅಪಘಾತವಾಗಲಿಲ್ಲ. ಆದರೂ ಏನೋ ಆಯಿತು ಎಂಬಂತೆ ಕುತೂಹಲ, ಆಶ್ಚರ್ಯ, ಗುಸುಗುಸು, ಚರ್ಚೆ, ಓಡಾಟ ಎಲ್ಲಾ ಶುರುವಾಯಿತು ಆಫೀಸಿನೊಳಗೆ. ಆಗುವುದಾಯಿತು ಮುಂದೇನು?

ಕಾಮನ್ ಸೆನ್ಸ್ ಉಪಯೋಗಿಸಿದರೆ ಸಮಸ್ಯೆಯ ಪರಿಹಾರಕ್ಕೆ ಸುಲಭದ ದಾರಿ ಇತ್ತು. ರಿಜಿಸ್ಟರ್ ಪೋಸ್ಟ್‌ನಲ್ಲಿ ಹೋಗಬೇಕಾಗಿದ್ದ ಪತ್ರಗಳ ಲಿಸ್ಟ್ ಇತ್ತು. ಅದರ ಪ್ರಕಾರ ಯಾವಯಾವ ಡಿಪಾರ್ಟ್‌ಮೆಂಟಿನಿಂದ ಯಾರು ಯಾರಿಗೆ ಏನೇನೆಲ್ಲಾ ಹೋಗಬೇಕಿತ್ತೊ ಆ ವಿವರಗಳೆಲ್ಲಾ ತಿಳಿಯುತ್ತಿದ್ದವು. ಆಯಾಯ ಸೆಕ್ಷನ್ನಿಗೆ ವಿವರ ತಿಳಿಸಿ ಇನ್ನೊಂದು ಪತ್ರ ಯಾ ಕವರ್ ತಯಾರುಮಾಡಿ ಕಳಿಸುವ ಏರ್ಪಾಡು ಮಾಡಿದರೆ ಸಮಸ್ಯೆ ಮುಗಿಯುತ್ತಿತ್ತು.

ಆದರೆ ಕೆಲಸ ನಾವು ಎಣಿಸಿದಷ್ಟು ಸುಲಭವೆ? ಆಫೀಸರ್ ಕೇಳುತ್ತಾರೆ, ಆಡಿಟ್‌ನವರು ಕೇಳುತ್ತಾರೆ, ಇನ್ಸ್‌ಪೆಕ್ಷನ್‌ನವರು ಕೇಳುತ್ತಾರೆ. ರೆಕಾರ್ಡ್ ಸರಿ ಇರಬೇಕು. ರೂಲ್ಸ್ ಅಂದರೆ ರೂಲ್ಸ್, ರೂಲ್ಸ್ ಪ್ರಕಾರವೇ ಆಗಬೇಕು ಏನೀ ರೂಲ್ಸ್, ಚರ್ಚೆ ಪ್ರಯೋಜನವಿಲ್ಲ. ಎಲ್ಲವೂ ಕಪ್ಪುಬಿಳಿಯಲ್ಲಿರಬೇಕು. ಆಫೀಸು ನೋಟ್, ಅಬ್ಸರ್‌ವೇಶನ್, ಸಜೆಷನ್, ಡಿಸಿಷನ್ ಅನಂತರ ಆ್ಯಕ್ಷನ್, ಫೈಲು ಹುಟ್ಟಿ ಬೆಳೆಯತೊಡಗಿತು.

ಆ ಫೈಲಿನಲ್ಲಿದ್ದ ಕೆಲವು ಟಿಪ್ಪಣಿಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ ಮತ್ತೆ ಏನಾಗಿರಬಹುದೆಂಬುದನ್ನು ಊಹಿಸಲು ಅನುಕೂಲವಾಗುವಂತೆ.

''ದನ ಕಾಂಪೌಂಡಿನೊಳಕ್ಕೆ ಏಕೆ ಬಂತು, ಹೇಗೆ ಬಂತು, ಅಲ್ಲಿ ಮೇಯಲು ಹುಲ್ಲು ಇರಲಿಲ್ಲವೇ? ಕಾಗದದ ಕಟ್ಟಿಗೇ ಅದು ಬಾಯಿ ಹಾಕಿತು ಎಂಬುದಕ್ಕೆ ಏನು ಸಾಕ್ಷಿ. ಇದನ್ನು ಬೇರೆಯಾರಾದರೂ ನೋಡಿದ್ದಾರೆಯೇ? ವಾಚ್‌ಮ್ಯಾನ್ ಏನು ಮಾಡುತ್ತಿದ್ದ. ಅವನ ಅಭಿಪ್ರಾಯ ಕೇಳುವುದು ಒಳ್ಳೆಯದು, ಅವನಿಗೆ ಮೆಮೊ ಇಶ್ಯು ಮಾಡತಕ್ಕದ್ದು.

ಪೋಸ್ಟ್ ಆಫೀಸಿಗೆ ತೆಗೆದುಕೊಂಡು ಹೋಗತಕ್ಕ ಕಾಗದ ಪತ್ರಗಳನ್ನು ರೂಲ್ ಪ್ರಕಾರ ಪೋಸ್ಟ್ ಬ್ಯಾಗಿಗೆ ಹಾಕಿ ಬೀಗ ಜಡಿದು ಯಾಕೆ ತೆಗೆದುಕೊಂಡು ಹೋಗಲಿಲ್ಲ. ಈ ಬಗ್ಗೆ ಡಿಸ್ಪಾಚ್ ಕ್ಲರ್ಕ್, ಪಿಯೋನ್ ಹಾಗೂ ಕಾಗದಕ್ಕೆ ಸಹಿ ಹಾಕಿದ್ದ ಸೆಕ್ಷನ್ ಹೆಡ್ ಉತ್ತರಿಸ ತಕ್ಕದ್ದು.

ಆಯಾಯಾ ಸೆಕ್ಷನ್‌ಗಳಿಗೆ ಮಾಹಿತಿಕೊಟ್ಟು ಮುಂದಿನ ಆ್ಯಕ್ಷನ್ ಅವರು ತೆಗೆದುಕೊಳ್ಳುವಂತೆ ಆದೇಶ ನೀಡತಕ್ಕದ್ದು.''

ಆ ಕಟ್ಟಿನಲ್ಲಿದ್ದ ಹದಿಮೂರು ಕವರ್‌ಗಳಲ್ಲಿ ಒಂದು ಕ್ಲೈಮ್ಸ್ ಡಿಪಾರ್ಟ್‌ಮೆಂಟಿನ ಫೈಲು ಕೂಡಾ ತಾನೇನು ಕಡಿಮೆ ಅಂತ ಬೆಳೆಯ ತೊಡಗಿತು.

ಚೆಕ್ ಕಳೆದು ಹೋಗಿದೆ. ದನ ತಿಂದಿದೆ ಎಂದು ತಿಳಿಸಲಾಗಿದೆ. ಡೂಪ್ಲಿಕೇಟ್ ಚೆಕ್ ಇಶ್ಯೂ ಮಾಡಬೇಕಾದರೆ ಈ ಕೆಳಗಿನ ಅವಶ್ಯಕತೆಗಳು ಅಗತ್ಯ. - ಈ ಬಗ್ಗೆ ಡಿಸ್ಪ್ಯಾಚ್ ಸೆಕ್ಷನ್ನಿನ ಸರ್ಟಿಫಿಕೇಟ್,

ಬ್ಯಾಂಕಿಗೆ ಸ್ಟಾಪ್ ಪೇಮೆಂಟ್ ಆರ್ಡರ್(Stop Payment Order) ರಿಜಿಸ್ಟರ್ಡ್ ಪೋಸ್ಟಿನಲ್ಲಿ ಕಳಿಸತಕ್ಕದ್ದು.

ಚೆಕ್ ಕ್ಯಾಶ್ ಆಗಿಲ್ಲವೆಂದು ಬ್ಯಾಂಕಿನಿಂದ ಧೃಡೀಕರಣ ಪತ್ರ ಬಂದ ಮೇಲೆ ಪಾರ್ಟಿಗೆ ಕಾಗದ ಬರೆದು ನೂರು ರುಪಾಯಿ ಸ್ಟಾಂಪ್ ಪೇಪರಿನಲ್ಲಿ ಇಂಡೆಮ್ನಿಟಿ ಬಾಂಡ್ ತರಿಸಿ. ಸೂಕ್ತ ವರಮಾನ ಜಾಮೀನದಾರಾನೂ ಅಗತ್ಯ.

ಚೆಕ್ ಪೋಸ್ಟ್ ಆಗದೆ ಗ್ರಾಹಕನಿಗೆ ಸಿಗುವುದು ಹೇಗೆ? ಚೆಕ್ ಸಿಗದೇ ಆತ ಚೆಕ್ ಕಳೆದು ಹೋಗಿದೆ, ಬೇರೆ ಚೆಕ್ ಕೊಡಿ ಎಂದು ಕೇಳುವುದು ಹೇಗೆ? ಅದೂ ನೂರು ರೂಪಾಯಿ ಸ್ಟಾಂಪ್ ಪೇಪರಿನಲ್ಲಿ ಇಂಡೆಮ್ನಿಟಿ ಬಾಂಡ್ ಕೊಡುವುದಾದರೂ ಏಕೆ. ಆತನೂ ತಕರಾರು ಮಾಡದೇ ಇದ್ದಾನೆಯೇ! ಆದರೆ ಇವ್ಯಾವೂ ಇಲ್ಲದೆ ಬೇರೆ ಚೆಕ್ ಕೊಡಲು ರೂಲ್ಸ್ ಇಲ್ಲವಲ್ಲಾ!

ಪತ್ರ ವ್ಯವಹಾರ, ಫೈಲುಗಳ ಜಿಗಿದಾಟ, ಓಡಾಟಗಳ ನಡುವೆಯೇ ಮೂರು ತಿಂಗಳು ಕಳೆಯಿತು. ಚೆಕ್ ಸ್ಟೇಲ್ (Stale) ಆಯಿತು. ನಾಲ್ಕನೆಯ ತಿಂಗಳಿನಲ್ಲಿ ಬ್ಯಾಂಕ್

ಸ್ಟೇಟ್‌ಮೆಂಟ್ ಬಂದು ಅದರಲ್ಲಿ ಈ ಚೆಕ್ ಇನ್ನೂ ಪಾವತಿಯಾಗಿಲ್ಲ ಎಂದು ಖಾತರಿಯಾದ ಮೇಲೆ ಐದನೇ ತಿಂಗಳಲ್ಲಿ ಹತ್ತು ಸಾವಿರ ರೂಪಾಯಿಯ ಚೆಕ್ ರಿಜಿಸ್ಟ್ರಾರ್ಡ್ ಪೋಸ್ಟಿನಲ್ಲಿ ಹೋಗಿ ಆರನೇ ತಿಂಗಳು ಗ್ರಾಹಕನ ಅಕೌಂಟಿಗೆ ಆ ಹತ್ತು ಸಾವಿರ ರೂಪಾಯಿ ಹೋಗಿ ಸೇರಿಕೊಂಡಿತು.

ಇಷ್ಟೆಲ್ಲ ಅನಾಹುತಕ್ಕೆ ಕಾರಣವಾದ ಆ ದನಕ್ಕೆ ಏನು ಶಿಕ್ಷೆ?

ಎಲ್ಲಾ ಹಳ್ಳಿಗಳಿಗೂ ಮೂಲಭೂತ ಸೌಕರ್ಯ-ಪ್ರಧಾನಿಯ ಭರವಸೆ.

'ಹಂಗಾದ್ರೆ ನಮ್ಮಳ್ಳಿಲೂ ಕಂಟಕಿಚಿಕನ್, ಪಿಜ್ಜಾ, ಮೆಕ್‌ಡೋನಾಲ್ಡ್ ಫಾಸ್ಟ್ ಫುಡ್ಡು, ಎಲ್ಲಾ ಅಲ್ಲೇ ಸಿಕ್ತೈತಂತೆ-ಮುಂದ್ಲ ವರ್ಷ ನಮ್ಮಳ್ಳೀಲೇ ಮಿಸ್ವರ್ಲ್ಡ್ ಚುನಾವಣೆ ನಡೀಬೇಕೇಂತ ಪ್ರಧಾನಿಗಳಿಗೆ ಮನ್ವಿಮಾಡೋಣಂತೆ-ಬಾರ್ಲಾ ಅಳ್ಳಿಗೆ ಓಗಾನ-ಇಲ್ಲೇನೈತೆ ಬೆಂಗ್ಳೂರಾಗೆ, ಹೊಗೆ, ಧೂಳು, ಗದ್ಲ.....'

★★★

'ಇಲ್ನೋಡಿದ್ರಾ, ಈ ನ್ಯೂಸ್? ಮುಂದಿನ ವರ್ಷದಿಂದ ನಮ್ಮ ರಾಜ್ಯದಲ್ಲಿ ಒಂದೂ ಏಕೋಪಾಧ್ಯಾಯ ಶಾಲೆಗಳಿರಲ್ಲವಂತೆ-ಅಂದ್ರೆ ನಮ್ಮ ಸ್ಕೂಲಿಗೆ ನಿಮ್ಮ ಜೊತೆಗೆ ಇನ್ನೊಬ್ಬ ಮೇಷ್ಟ್ರು ಬರಬಹುದಲ್ಲವೇ?'

'ಹಯ್ಯೋ! ಹುಚ್ಚೀ! ನಾಡಹುಚ್ಚೀ! ಇರೋ ಏಕೋಪಾಧ್ಯಾಯ ಶಾಲೆಗಳನ್ನೆಲ್ಲಾ ಮುಚ್ತಾರೇನೋಂತ ನನ್ನ ಅನುಮಾನ!'

★★★

[ಕೊರವಂಜಿ-ಏಪ್ರಿಲ್-೧೯೫೭ ಸಂಚಿಕೆಯಿಂದ]

☆ ಒಂದು ಮಹೋಪಮೆ ☆

(ಬೀರಪ್ಪ ಪುರಾಣದಿಂದ)

ನಾ. ಕಸ್ತೂರಿ

ಎಮ್ಮೆಸ್ಸಿ ಎನಿಸುವನ್ನೆಗಂ ಎನಗಸಹ್ಯಮೀ ವಿವಾಹಂ
ಎಂದನುದ್ಘಟಿತನದಾವೇಶಮುತ್ಸಾಹದಿಂ ಪ್ರಕ್ಷುಬ್ಧಪ್ರಭಾವ ಪ್ರವಾಹೋ
ನ್ಮೀಲಿತ ನಯನಾಂತರ್ಗತವಹ್ನಿ ಜ್ವಾಲಾಪೀಡಿತ ವಿನ್ಯಾಸಸಂನ್ಯಾಸದಿಂ-
ಬೀರಪ್ಪ!....(ಇದಕ್ಕೆ ಮಹೋಪಮೇ ಈ ರೀತಿ ಬರುತ್ತೆ).....
ಉದ್ಯಾನವೊಂದರಲಿ ಸಸ್ಯಶಿಶುಪಾಲ ಮಾಲೀಕ ಪ್ರೀತಿವಾತ್ಸಲ್ಯ ಪೂರ್ಣಪ್ರವಾಹದಿಂ
ಅಂಕುರಿಸಿ ಸಿಂಪರಿಸಿ ಮುಳ್ಳುಬೇಲಿಯ ಪಂಜರದಿ ವನ ಶುಕನಂತೆ ಪೋಷಿಸಿದ
ಮಾವಿನಾಮರದಲ್ಲಿ, ಕೊಂಬೆಕೊಂಬೆಗಳ ಸಂಖ್ಯಾತವಾವಿರ್ಭವಿಸಿ
ಎಣ್ದೆಸೆಗೆಸೆವ ಕರಂಗಳಂ ಪೊಣ್ದು ಪರ್ಣಲಕ್ಷೋಪಲಕ್ಷಗಳುನೇಸರಮೃತವನುಂಡು
ಬುವಿಯ ತಂಪನು ಹೀರಿ ನಡುನಡುವೆ ಹೂಬಿಟ್ಟು ಹೀಚಾಗಿ
ತೂಗುಗೊಂಚಲ ಮೂಕಮಂಚದಲಿ ಕಾವುಂಡು ಸ್ವಾಪುಂಡು ಬಲಿತು ಬೆಳೆದು
ಆ ಗೊಂಚಲಂಚಿನಲಿ ರಂಜಿಸುವುದೊಂದೆ ಫಲ, ಉಳಿದರನು ಕೆಳಕೆಡಹಿ!-
ಆಂಗ್ಲ ಚಕ್ರವರ್ತಿನಿಯ ಮಣಿಮಕುಟ ಕಿರೀಟ ಮಧ್ಯದಲಿ ಹೊಳೆಹೊಳೆವ
ಕೊಹಿನೂರಿನಂತೆ-
ಆ ದೊಡ್ಡ ಮಾಗಾಯಿ ಹಸುರುಮುದ್ದೆಯ ರತ್ನ- ಆ ರತ್ನವನು ಮಡಿಲಲ್ಲಿ ಮಲಗಿಸಿ
ಮುದ್ದಿಡುವಾಸೆ ಭೂಮಾತೆಯಂತರಂಗದಲಿ ಮೂಡಿ ಬರೆ. ಬಾರೆಂಬ ನೆಲದಕರೆ,
ಬೀಳೆಂಬ ತಳದಕರೆ, ಆ ಕರೆಗೆ ಕಿವಿಗೊಡದೆ, ತೊಟ್ಟು ಫಟ್ಟನೆ ಓಡಿವ
ಫಲದ ಛಲ!-''ನಾನೊಲ್ಲೆನೀಗಲೇ! ಇಲ್ಲಿ ಓಲಾಡುವೆನು ಜೋಕಾಲಿಯಾಡುವಾನಂದ'',
ಅಲ್ಲಿಹಾಖಾಸನದಿ ತೂಗುತೇಳುತ ಕಾಯಿ, ಬಿಸಿಲಿಂಗೆ ಬೃಹತ್ತಾಗಿ. ಗಾಳಿ ಬೀಸಲಾ ಟಕ್ಕೆ
ತೋಳ್ತೆಕ್ಕೆಯನಿತ್ತು,-ಒಗರೆಲ್ಲ ಹುಳಿಯಾಗಿ,....ಹುಳಿಯೆಲ್ಲ ಸಿಹಿಯಾಗಿ,-

ಒಳಗೆಲ್ಲ ರಸತುಂಬಿ, ಜೇನ ಫೇನಗಳುಕ್ಕಿ,
ಪಣ್ಣಾದಮೇಲೆಯೆ ಮಣ್ಣಿಗುದುರುವೆ ನಾನು,
ಆಗ, ನೀನಾಹ್ವಾನಿಸದೆಯೆ, ಸ್ವಾಗತವನೀಯದೊಡಂ, ಒತ್ತಾಯಮಾಡದೊಡಂ.
ನಾನೆ ನಿಶ್ಚಿತನನಾಗಿ, ಅಂತಃಪ್ರೇರಣಾಸ್ಫುರಣದುನ್ಮೇಷದಾಕರ್ಷಣೆಯಿಂ
ಬೀಳುವೆನು ನೆಲಕೆಂದು, ನುಡಿಯುವಾ ಮಾವಿನಕಾಯಮೋಡಿಯಲಿ,
ಹೇಳಿದನು, ಬೀರಪ್ಪ,
''ಎಮ್ಮೆಸ್ಸಿ ಮುಗಿದೊಡನೆ, ಮದುವೆ,'' ತನಗೆಂದು.

[ಆಕಾಶವಾಣಿ 'ವಿಕಟಕವಿ ಗೋಷ್ಠಿ' ಯಲ್ಲಿ ಓದಿದ್ದು]

ಡೈವೋರ್ಸ್ ಕೇಸು. ಕೋರ್ಟಿನಲ್ಲಿ ವಿಚಾರಣೆ ನಡೀತಿದೆ. ಗಂಡ ಒಂದು ಕಡೆ, ಹೆಂಡತಿ ಒಂದು ಕಡೆ ಮೂತಿ ಮಾಡಿಕೊಂಡು ನಿಂತಿದ್ದಾರೆ. ಒಬ್ಬರನೊಬ್ಬರು ನೋಡಲೂ ತಯಾರಿಲ್ಲ.

'ಸರಿ, ಡೈವೋರ್ಸ್ ಮಾಡಬಹುದು. ಆದ್ರೆ ಚೆನ್ನಾಗಿ ತಿಳಕೊಳ್ಳಿ, ನಿಮ್ಮಲ್ಲಿರೋದನ್ನೆಲ್ಲಾ ಸರಿಯಾಗಿ ಎರಡು ಭಾಗ ಮಾಡಬೇಕು-ಇಬ್ಬರಿಗೂ ಅರ್ಧರ್ಧ ಪಾಲು', ಎಂದರು ನ್ಯಾಯಾಧೀಶರು.

'ಹಾಗಾದ್ರೆ ನಮ್ಮ ಮೂರು ಮಕ್ಕಳು?' ಎಂದಳು ಹೆಂಡತಿ.

'ಆ ಸಮಸ್ಯೇನ ನೀವೇ ಬಗೆಹರಿಸ್ಕೋಬೇಕು,' ಎಂದರು ನ್ಯಾಯಾಧೀಶರು. ಒಂದು ಕ್ಷಣ ಕೋರ್ಟಿನಲ್ಲಿ ಸಂಪೂರ್ಣ ನಿಶ್ಶಬ್ದ ವಾತಾವರಣ.

ಹೆಂಡತಿ ಇದ್ದಕ್ಕಿದ್ದಹಾಗೆ ನಿಂತ ಕಾಲ ಮೇಲೆ ಏನೋ ನಿರ್ಧರಿಸಿ ಬಿಟ್ಟಳು. ತಕ್ಷಣ ಗಂಡನತ್ತ ದಾಪುಗಾಲು ಹಾಕಿ ಹೋಗಿ ಅವರ ಶರಟಿನ ಕಾಲರ್ ಹಿಡಿದು ಎಳೆಯುತ್ತಾ, 'ನಡೀರಿ ಮನೇಗೆ ಹೋಗೋಣ,' ಎಂದಳು. ಪಿಳಿಪಿಳಿ ಕಣ್ಣು ಬಿಡುತ್ತಿದ್ದ ಗಂಡನನ್ನು ಎಳೆದುಕೊಂಡೇ ಕೋರ್ಟಿನಿಂದ ಹೊರಗೆ ಹೋಗುತ್ತಾ ಹಿಂದೆ ತಿರುಗಿ ನ್ಯಾಯಾಧೀಶರನ್ನು ಉದ್ದೇಶಿಸಿ ಹೇಳಿದಳು.

'ಮುಂದಿನ ವರ್ಷ ಮತ್ತೆ ಬರ್ತೀವಿ, ನಮ್ಮ ಕೇಸ್‌ನ ಹಾಗೇ ಬಾಕಿ ಇಟ್ಟಿರಿ.'

ಕ್ರಿಕೆಟ್

ಅ.ರಾ. ಮಿತ್ರ

ಕನ್ನಡದ ಮಕ್ಕಳಿಗೆ ಹುರುಪು ತಂದದ್ದು
ಕ್ರಿಕೆಟ್ ಅಂಬೋ ಕ್ರೀಡೆ
ಕಿರುಚುತ್ತವೆ ಕಾಮೆಂಟರಿ ನೋಡುತ
ಇಡೀ ಕನ್ನಡ ನಾಡೆ

ಅನಿಲ್ ಕುಂಬ್ಳೆಯು ತಿರುಚಿರೆ ಬಾಲು
ಹೆಂಗಳಿಗೆ ಎದೆ ಬಡಿತ ಆಗುವುದು ಚಾಲು
ಶ್ರೀನಾಥ ಶ್ರೀನಾಥ ವೇಗಪತಿನಾಥ
ಒಡಿಹಾರಿಸು ನೀನು ವಿಕೆಟು ವಿಪರೀತ
ದಾಖಲೆಯ ಸ್ಥಾಪಿಸಲಿ ಡೇವಿಡ್ಡು ಜಾನ್ಸನ್ನು
ಸರಕಾರ ಕೊಟ್ಟೀತು ನಿನಗೊಂದು ಮ್ಯಾನ್‌ಷನ್ನು
ರಾಹುಲ ದ್ರಾವಿಡನ ಸೆಂಚುರಿಯು ಚೆಂದ
ಸೊನ್ನೆ ಬಾರಿಸಿದಾಗ ಅವರ ಮತಿ ಮಂದ
ಸುನೀಲ ಜೋಶಿಯೋ ಧಾರವಾಡದ ಫೇಡ
ಬೌಲಿಂಗು ಬ್ಯಾಟಿಂಗು ಆಲ್‌ರೌಂಡು ಘೋಡ
ವೆಂಕಟೇಶಪ್ರಸಾದ ಎತ್ತರದ ಆಳು
ದೊಡ್ಡ ಘಟಗಳು ಕೂಡ ಅವಗಾಯ್ತು ಕೂಳು

ಕನ್ನಡಿಗರಾರಿರುವ ಭಾರತದ ತಂಡ
ತೆರೆದುಕೊಳ್ಳಲಿ ಹೊಸತು ಇತಿಹಾಸ ಕಾಂಡ

ಒಂದು ಕಳಕಳಿಯ ಪತ್ರ

ಇಂದು. ರಮೇಶ್

ಮಾನ್ಯರೇ,

ಅಕ್ಟೋಬರ್ ಅಪರಂಜಿ ಇದೀಗ ತಾನೆ ಓದಿ ಮುಗಿಸಿದೆ. ಮೂರು ತಿಂಗಳ ಪರದೇಶದ ವಾಸದ ನಂತರ ಬೆಂದಕಾಳೂರಿನ ಮನೆ ಬಾಗಿಲ ತೆಗೆದು ಧೂಳು ಹೊಡೆದು, ನೀರು ತುಂಬಿ, ಮೋಂಬತ್ತಿ ಕೊಂಡು ಪುನಃ ಸಂಸಾರ ಶುರುಮಾಡುತ್ತಿದ್ದೇವೆ.

ಎಂ.ಎಸ್.ಕೆ ''ಬಾತ್ ರೂಂ ಪ್ರವೇಶ'' ಚೆನ್ನಾಗಿತ್ತು. ಹಾಗೆ ಜ್ಞಾಪಕ ಬಂತು ನನ್ನ ಮಗನ ಒಂದು ಮಾತು. ಅವನು ಹೇಳುವ ಹಾಗೆ ''ಮೊಹೆಂಜೊದಾರೋದಲ್ಲಿ'' ""Underground Drainage" ಇತ್ತು. ಆಮೇಲೆ ಭಾರತೀಯರು ಅದನ್ನು ಮರೆತೇ ಬಿಟ್ಟರು ಅಂತ. ನಿಜ ಹಳೇ ಮೈಸೂರಿನ ತಾಲ್ಲೂಕು, ಜಿಲ್ಲೆ, ಹೋಬಳಿ ಕೇಂದ್ರಗಳಲ್ಲಿ ಬೆಳೆದ ನನಗೆ ಎಲ್ಲಾ ತರಹ ಟಾಯಲೆಟ್‌ಗಳ ಅನುಭವಾನೂ ಇದೆ.

ಮೂರು ತಿಂಗಳ ಪರದೇಶದ ವಾಸ ಅಂದೆನಲ್ಲ. ಆಸ್ಟ್ರೇಲಿಯಾಕ್ಕೆ ಹೋಗಿದ್ದೆವು. ಅಮೇರಿಕಾದಂತೆ ಒಂದು ಹಿಂದು ಭಾರತೀಯರಿಲ್ಲದ ನಾಡು. ಹಲವಾರು ಜನ ಕೇಳಿದರು, ಇಲ್ಲಿ ನಿಮಗೆ Strike ಆದಂಥಾ ವಿಶೇಷ ಏನು ಅಂತ. ಶುಚಿ, Pothole ಇಲ್ಲದ ರಸ್ತೆಗಳು, ಒಬ್ಬರನೊಬ್ಬರು ಮುಟ್ಟದ Queue ಗಳು, ಬೇಕಾದಷ್ಟಿದ್ದವು ಹೇಳೋಕ್ಕೆ ಅಷ್ಟರಲ್ಲಿ ರಮೇಶ್ ಜ್ಞಾಪಿಸಿದರು- ಟಾಯ್ಲೆಟ್ - ಅಂತ.

ನಿಜ, ಮದರಾಸಿನ ಏರ್‌ಪೋರ್ಟ್‌ನ ಟಾಯ್ಲೆಟ್ ನೋಡಿದ ಮೇಲೆ ಹಾಗೇ ನಮ್ಮೂರಿನ ಬಸ್ ಸ್ಟಾಂಡಿನ ಮೂಗು ಮುಚ್ಚುವ exercise ಆದಮೇಲೆ ಆಸ್ಟ್ರೇಲಿಯಾದ ಟಾಯ್ಲೆಟ್ ಬಗ್ಗೆ ಹೇಳಲೇ ಬೇಕು ಅನಿಸಿತು. Sydney ಯ ಜನ ಅಮೇರಿಕನ್ನರನ್ನ Copy ಮಾಡ್ತಾರೆ. ಅವರ ಹಾಗೆಯೇ Shopping MAllಗಳು, ಬೆಳಿಗ್ಗೆಯಿಂದ ಸಂಜೆವರೆಗೂ shopping, ಊಟ, ಸಿನೆಮಾ, hair dresser, Ice Skating ಎಲ್ಲಾ ಮುಗಿಸಿ ಮನೆಗೆ ಬರುತ್ತಾರೆ. ನಾವೂ ಹಾಗೇ ಹೋಗಿದ್ದೆವು. ಆಹಾ, ಎಂಥಾ ಟಾಯ್ಲೆಟ್ಸ್. ಅಚ್ಚ ಬಿಳಿ ಬಣ್ಣದ Tiles ಬಿಸಿನೀರು, ಬೇಕಾದಷ್ಟು ಸೋಪು, ಪೇಪರ್, ಆಟೋಮ್ಯಾಟಿಕ್ ಫ್ಲಷಿಂಗ್ ಅದೂ ಸೋಪಿನ ಜೊತೆ. ಸಂತೋಷವಾಯಿತು.

ಹಾಗೇ ಆಸ್ಟ್ರೇಲಿಯ ವೆಸ್ಟ್ ಇಂಡೀಸ್ ಕ್ರಿಕೇಟ್ ಮ್ಯಾಚಿಗೆ ಹೋದೆವು. ಪೋಲಿಸರಿಲ್ಲ, ನಗುಮುಖದ ಸ್ವಾಗತ, ನೀರಂತೆ ಹರಿಯುವ ಬೀರ್, ಟಾಯ್ಲೆಟ್ - ಆಹಾ, ಸಮೃದ್ಧಿಯಾಗಿ ಹರಿಯುವ ಬಿಸಿ, ತಣ್ಣೀರು, ಸೋಪು, ಪೇಪರ್, ಒಂದು ಕಡೆ ಇಪ್ಪತ್ತಕ್ಕಿಂತ ಹೆಚ್ಚು ಟಾಯ್ಲೆಟ್‌ಗಳು, ಶುಭ್ರ, ಸ್ವಾಮಿ, ಮಹಾಶುಭ್ರ.

ಆಸ್ಟ್ರೇಲಿಯಾದ Air Force Day ಆಯಿತು ಬನ್ನಿ ನೋಡಿ ಅಂತ ರೇಡಿಯೋ

ಟಿ.ವಿ ನಲ್ಲೆಲ್ಲಾ ಕರೆದರು. ರೈಲಿನಲ್ಲಿ ಮುಕ್ಕಾಲು ಗಂಟೆ ಪ್ರಯಾಣ ಮಾಡಿ ಹೋದೆವು. ವಿಶಾಲ ವಾದ Air Force Base ಸಾವಿರಾರು ಜನ, ಪಟ್ಟೆ ಪಟ್ಟೆಯ ಚಪ್ಪರಗಳಲ್ಲಿ ಊಟ ತಿಂಡಿ, ನೀರು, ಬೀರು, ಸಾಲಾಗಿ ಹಳದಿ, ಹಸಿರು ಬಣ್ಣದ ಟಾಯ್ಲೆಟ್ಸ್ ಒಂದೊಂದು ಲೈನಿನಲ್ಲಿ 50-ಟಾಯ್ಲೆಟ್ಸ್ ಹತ್ತಿರ ಹೋದರೆ-ಬೋರ್ಡ್ ಕಾಣಿಸಿತು ""Rent-a-Loo" ಅಂತ 20 ಸೆಂಟ್ ಹಾಕಿ ಒಳ ಹೊಕ್ಕರೆ. ಅದೇ ಶುಭ್ರತೆ, ಅದೇ ಬಿಸಿನೀರು, ವ್ಯಾಕ್ಯೂಂನಲ್ಲಿ ಕ್ಲೀನ್ ಮಾಡುವ ಫ್ಲಷ್‌ಗಳು, ಮಹದಾನಂದವಾಯಿತು.

ಹೆಲೆನ್ಸ್ ಬರ್ಗ್‌ಗೆ ಹೋದೆವು, ಸುಮಾರು 70 ಕಿ.ಮೀ. ಮಧ್ಯದಲ್ಲಿ National Park, ಪಾರ್ಕ್ ಅಂದರೇನು, ಕಾಡೇಸರಿ, ಅಲ್ಲೊಂದು Rest House, ಚಿಕ್ಕದೊಂದು ಅಂಗಡಿ, ದಾರಿ ತೋರುವ ಗೈಡ್‌ಗಳು, ಕೊಕಾಕೋಲಾ ಮೆಷಿನುಗಳು, ಮತ್ತು ಟಾಯ್ಲೆಟ್ಸ್-ತಿಳಿ ಹಸಿರು ಬಣ್ಣದ ಟೈಲ್ಸ್, ಬಿಸಿ ನೀರು, ಸಮೃದ್ಧಿಯಾಗಿ ಸೋಪು, ಪೇಪರ್, ವಾಸನೆಯಿಲ್ಲದ, ಉಪಯೋಗಿಸಿಯೇ ಇಲ್ಲವೇನೋ ಅನ್ನೋ ರೀತಿಯ ಟಾಯ್ಲೆಟ್ಸ್.

Blue Maountains ಗೆ ಹೋಗಿದ್ದೆವು. ಗಿಜಿಗಿಜಿ ಜನ, ಹೆಚ್ಚಾಗಿ ಬಸ್ ತುಂಬಿಕೊಂಡು ಬಂದಂಥ ಜಪಾನೀಯರು. ಅತಿ ಆಧುನಿಕ ಕ್ಯಾಮೆರಾಗಳನ್ನು ಕ್ಲಿಕ್ಕಿಸಿದ್ದೇ ಕ್ಲಿಕ್ಕಿಸಿದ್ದು. ಒಂದು ಕೆಫೆಟೇರಿಯ ಅಲ್ಲೇ ಪಕ್ಕದಲ್ಲಿ ಟಾಯ್ಲೆಟ್ಸ್, ಶುಭ್ರವಾದ ಬಿಳಿ ಟೈಲ್ಸ್, ಬಿಸಿನೀರು, ಸೋಪ್, ಪೇಪರ್ ಒಂದಿಷ್ಟೂ ವಾಸನೆಯಿಲ್ಲ, ಸಚ್ಚಿದಾನಂದವಂತಹ ಅನುಭವ.

ಹಾಗೇ ಬೀಚಿಗೆ ಹೋಗಿದ್ದೆವು ಅಲ್ಲಿಂದ Olympics Aquatic Centre ಗೆ ಟಾಯ್ಲೆಟ್ಸ್ ನೋಡೊದಕ್ಕೆ ಅಂತಲೇ ಒಳಗೆ ಹೋಗಿ ಬಂದೆ. ಅದೇ ಶುಭ್ರತೆ, ಅದೇ ಸಮೃದ್ಧಿಯಾಗಿ ನೀರು. ಬ್ರಹ್ಮಾನಂದಕ್ಕೆ ಒಂದೇ ಗೇಣು!

ರಸ್ತೆ ರಿಪೇರಿ ಆಗ್ತಾ ಇತ್ತು. ಆರೇಳು ಜನ ಕೆಲಸ ಮಾಡುತ್ತಿದ್ದರು ಅಲ್ಲೇ ಹತ್ತಿರದಲ್ಲಿ ಒಂದು Rent-a-loo ನಿಂತಿತ್ತು. ಬಯಲಿನ ಕಥೆ ಗೊತ್ತೇ ನಿಮಗೆ? ಕ್ರುಶ್ಚೋವ್ ದೆಹಲಿಗೆ ಬಂದಾಗ ಪಾಲಂ ನಿಂದ ರಾಷ್ಟ್ರಪತಿ ಭವನಕ್ಕೆ ಬರೋ ದಾರೀಲಿ, ಬಯಲಲ್ಲಿ ಕೂತಿದ್ದ ಅನೇಕ ಜನರನ್ನು ನೋಡಿ ಕೇಳಿದರಂತೆ ಇವರು ಏನು ಮಾಡ್ತಾ ಇದಾರೆ ಅಂತ. ಪಾಪ ನೆಹರೂ ನಾಚಿ ಹೇಳಿದರಂತೆ Natures Call ಅಂತ. ಕ್ರುಶ್ಚೋವ್ Reaction - ರಷ್ಯಾದಲ್ಲಿ ಹೀಗಾಗೊಲ್ಲ. ಆಮೇಲೆ ನೆಹರೂ ಮಾಸ್ಕೋಗೆ ಹೋದರು. Airport ನಿಂದ ಊರ ಮಧ್ಯಕ್ಕೆ ಹೋಗುವ ದಾರಿಯಲ್ಲಿ ನೋಡಿದರಂತೆ. ಬಯಲಲ್ಲಿ ಯಾರೋ ಒಬ್ಬ ನಿಂತಿದ್ದಾನೆ "ಅಹಾ ರಷ್ಯಾದಲ್ಲೂ ಹೀಗಿದೆ" ಅಂದಾಗ ಕ್ರುಶ್ಚೋವ್ ಜನರನ್ನು ಅಟ್ಟಿ "ಯಾರು ನೋಡಿ, Arrest Him" ಅಂದರಂತೆ, ಜನ ವಾಪಸ್ ಬಂದು ಹೇಳಿದರಂತೆ -"Sorry ಅವರಿಗೆ Diplomatic Immunity ಇದೆ ಅವರು ಭಾರತದ ರಾಯಭಾರಿಗಳು Arrest ಸಾಧ್ಯವಿಲ್ಲ" ಅಂತ. Toilets ಸ್ವಾಮಿ,

The most important part of our life.

Australiaದ ಜೂನಿಯರ್ ಕ್ರಿಕೆಟ್ ಟೀಂ ಭಾರತದಲ್ಲಿ ಪ್ರವಾಸ ಮಾಡುತ್ತಿದ್ದಾಗ ಒಂದು ವಿಷಯ ವರದಿ ಆಗಿತ್ತು. ಬೆಂಗಳೂರಿನಿಂದ ಮದರಾಸಿಗೆ (Sorry ಚೆನ್ನೈ) ರೈಲಿನಲ್ಲಿ ಹೋಗುತ್ತಿದ್ದಾಗ ರೈಲಿನ ಶೌಚಾಲಯದ ಬಗ್ಗೆ ಆಸ್ಟ್ರೇಲಿಯಾದವರು ಮನಬಿಚ್ಚಿ ಮಾತಾಡಿದರು. ನಮ್ಮ ಕ್ರಿಕೆಟ್ ಅಸೋಸಿಯೇಷನ್‌ನ ನಾಗರಾಜ್ ಅದಕ್ಕೆ ತಮಗೆ ತೋರಿದ ಹಾಗೇ Reaction ತೋರಿಸಿದ್ದರು. ನನ್ನ ಆಸ್ಟ್ರೇಲಿಯಾ ಅನುಭವ ಆದೇಶದ ಕ್ರಿಕೆಟ್ ಟೀಂನವರು ಹೇಳಿದ್ದನ್ನು ಈಗ ಅರ್ಥ ಮಾಡಿಕೊಳ್ಳುವಂತಾಯಿತು - Toilets ಸ್ವಾಮಿ, ತುಂಬಾ important ಉ.



''ರಾಬರ್ಟ್ ಅಂತ ಹೆಸ್ರಿರೋರೆಲ್ಲಾ ಒಳ್ಳೋರೇ ಅನ್ನುಕ್ಕಾಗುಲ್ಲಮ್ಮ!''

ಮುದ ನೀಡಿದ ಕಾರ್ಲ್ ಸೇಗನ್

ಶಿವು

ಹತ್ತು ಹನ್ನೆರಡು ವರ್ಷಗಳ ಹಿಂದಿನ ಮಾತು. ಆದರೂ ಇನ್ನೂ ಕಣ್ಣಿಗೆ ಕಟ್ಟಿದ ಹಾಗಿದೆ. ಆಗಿನ್ನೂ ನಮ್ಮ ಮನೆಗೆ ಕಲರ್ ಟಿ.ವಿ. ಬಂದ ಹೊಸದು. ನನ್ನ ಮಿತ್ರ ವಿಕ್ಟರ್ ''ಭಾನುವಾರ ಬೆಳಿಗ್ಗೆ ಹನ್ನೊಂದೂವರೆಗೆ, ಸೇಗನ್ನನ 'ಕಾಸ್ಮಾಸ್' ನೋಡೋದು ಮರೆಯಬೇಡ'' ಎಂದು ಆಗ್ರಹಪೂರ್ವಕವಾಗಿ ಹೇಳಿದ್ದ. ಈ ಕಾಸ್ಮಾಸ್ ಧಾರವಾಹಿ, ಹದಿಮೂರು ಭಾಗಗಳಲ್ಲಿದ್ದಂತೆ ನೆನಪು. ಒಂದೊಂದು ಭಾಗವೂ ಸುಮಾರು ಒಂದು ಘಂಟೆಯ ಅವಧಿಯದು. ಕಾರ್ಯಕ್ರಮದ ಪ್ರಾರಂಭದಲ್ಲಿಯೇ ಜೀನ್ಸ್, ಸ್ವೆಟ್ಟರ್ ಧರಿಸಿದ, ಹೊರವಾದ ಕೂದಲಿನ, ನೀಳಕಾಯದ ವ್ಯಕ್ತಿಯ ಪ್ರವೇಶ. ಮಧ್ಯವಯಸ್ಕನಾಗಿದ್ದರೂ, ಸೇಗನ್ ಆ ದಿನಗಳಲ್ಲಿ ತೀರಾ ಎಳಕಾಗಿ ಕಾಣುತ್ತಿದ್ದ. ಅತ್ಯದ್ಭುತವೆನಿಸುವಷ್ಟು ವಿಶಾಲವಾದ ವಿಷಯದ ಹರಹು ಈ ಕಾಸ್ಮಾಸ್ ಧಾರಾವಾಹಿಗೆ. ನಕ್ಷತ್ರ ನೀಹಾರಿಕೆಗಳ ಹುಟ್ಟು, ಸೌರವ್ಯೂಹದ ಸೃಷ್ಟಿ, ಜೀವ ಸಂಕುಲದ ವಿಕಾಸ, ಬಾಹ್ಯಾಕಾಶಯಾನ, ಹೀಗೆ ಹತ್ತು ಹಲವಾರು ಸಂಗತಿಗಳನ್ನು ಕಥೆ, ಉಪಕಥೆಗಳೊಂದಿಗೆ, ಅತಿ ಸ್ವಾರಸ್ಯವಾಗಿ ಸೇಗನ್ ಹೇಳುತ್ತಿದ್ದರೆ, ಕೇಳುವುದೇ ಒಂದು ಸೊಗಸು.

ಒಮ್ಮೆ ಈ ಧಾರವಾಹಿಯಲ್ಲಿ ಕಾರ್ಲ್ ಅಲೆಕ್ಸಾಂಡ್ರಿಯಾದ ಮಹಾನ್ ಗ್ರಂಥಾಲಯವೊಂದರ ಬಗ್ಗೆ ಪ್ರಸ್ತಾಪಿಸಿದ್ದ. ಎರಡು ಸಾವಿರ ವರ್ಷಗಳ ಹಿಂದೆ, ಅಂದಿನ ಜಗತ್ತಿನ ಅತ್ಯಂತ ದೊಡ್ಡ ಅಧ್ಯಯನ ಕೇಂದ್ರವೊಂದು ಅಲೆಕ್ಸಾಂಡ್ರಿಯಾದಲ್ಲಿ ಇತ್ತಂತೆ. ಅತಿ ಮೇಧಾವಿ ಪಂಡಿತರು, ಶಾಸ್ತ್ರಜ್ಞರು ವ್ಯಾಸಂಗ ನಡೆಸುತ್ತಿದ್ದ ತಾಣವಾಗಿತ್ತಂತೆ, ಇದು. ಭೂಮಿಯ ವ್ಯಾಸವನ್ನು ಮೊಟ್ಟಮೊದಲ ಬಾರಿಗೆ ನಿಖರವಾಗಿ ಕಂಡುಹಿಡಿದ ಎರಾಟೋಸ್ತೆನೀಸ್, ರೇಖಾಗಣಿತದ ಪಿತಾಮಹ ಯೂಕ್ಲಿಡ್, ನಕ್ಷತ್ರರಾಶಿಗಳ ನಿಖರ ನಕ್ಷೆಯನ್ನು ಗುರುತಿಸಿ ಪ್ರಾರ್ಚಸ್, ಖ್ಯಾತ ಖಗೋಳಜ್ಞ ಟಾಲೆಮಿ, ಇವರೆಲ್ಲಾ ಈ ಮಹಾನ್ ಗ್ರಂಥಾಲಯದಲ್ಲಿ ವ್ಯಾಸಂಗ ನಡೆಸಿದ ದಿಗ್ಗಜಗಳು. ಈ ಗ್ರಂಥಾಲಯದ ರಚನೆ, ಯಾವ ಆಧುನಿಕ ವಿಶ್ವವಿದ್ಯಾಲಯದ ಕಟ್ಟಡಕ್ಕೂ ಕಡಿಮೆ ಇರಲಿಲ್ಲ. ಹತ್ತು ದೊಡ್ಡ ಸಭಾಂಗಣಗಳು, ಒಂದೊಂದರಲ್ಲಿ ಒಂದೊಂದು ಪ್ರತ್ಯೇಕ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳು, ಎರಡು ಸಭಾಂಗಣಗಳನ್ನು ಪ್ರತ್ಯೇಕಿಸುವಂತೆ ರಚಿಸಿದ ಹೂದೋಟಗಳು, ಚಿಮ್ಮುವ ನೀರಿನ ಕಾರಂಜಿ, ಹೀಗೆ ಉನ್ನತ ವ್ಯಾಸಂಗಕ್ಕೆ ತಕ್ಕ ವಾತಾವರಣ ನಿರ್ಮಾಣವಾಗಿತ್ತು, ಇಲ್ಲಿ. ಐದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ಪ್ಯಾಪೈರಸ್ ಸ್ಕ್ರಾಲ್‌ಗಳು ಈ ಗ್ರಂಥಾಲಯದಲ್ಲಿ ಸಂಗ್ರಹವಾಗಿದ್ದವಂತೆ. ಇಂತಹ ಭವ್ಯ ಗ್ರಂಥಾಲಯ, ಯುದ್ಧವೊಂದರಲ್ಲಿ ಶತ್ರುಬಣ ಹಚ್ಚಿದ ಬೆಂಕಿಯಿಂದ ಸಂಪೂರ್ಣವಾಗಿ ನಾಶವಾಗಿ ಹೋಯಿತಂತೆ.

ಸೇಗನ್ ಹೇಳುತ್ತಾನೆ. ''ಆ ಹಳೆಯ ಯುಗಕ್ಕೆ ಹೋಲಿಸಿದರೆ, ಈಗಿನ ವಿಜ್ಞಾನ

ಬಹುವಾಗಿ ಮುಂದೆ ಸಾಗಿದೆ ಎಂಬುದು ನಿಜ. ಆದರೂ ಅತಿ ಪ್ರಾಚೀನ ಚರಿತ್ರೆಯ ಬಗ್ಗೆ ನಮ್ಮ ಪ್ರಸಕ್ತ ಜ್ಞಾನ ಭಂಡಾರದಲ್ಲಿ ಅನೇಕ ಕತ್ತಲು ಭಾಗಗಳಿವೆ. ಗ್ರಂಥಾಲಯದಲ್ಲಿ ಸುಟ್ಟು ನಾಶವಾಗಿ ಹೋದ ಗ್ರಂಥಗಳಲ್ಲಿ, ಜಗತ್ ಸೃಷ್ಟಿಯಿಂದ ಮಹಾಪ್ರಳಯದವರೆಗು ಮನುಕುಲದ ಚರಿತ್ರೆಯನ್ನು ವಿವರವಾಗಿ ಬರೆದಿಟ್ಟ ಗ್ರಂಥವೊಂದಿತ್ತಂತೆ. ಇಂತಹ ಪುಸ್ತಕ ಈಗ ನಮಗೆ ದೊರಕುವಂತಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು'' ಎಂದು ಸೇಗನ್ ಉದ್ಗರಿಸುತ್ತಾನೆ.


ಇನ್ನೊಮ್ಮೆ ಸೇಗನ್ ರೊಸೆಟ್ಟಾ ಸ್ಟೋನ್ ಬಗ್ಗೆ ಹೇಳಿದ ವೃತ್ತಾಂತ ಬಹು ಸ್ವಾರಸ್ಯವಾಗಿತ್ತು. ಈಜಿಪ್ಟಿನ ಪಿರಮಿಡ್‌ಗಳ ಒಳ ಗೋಡೆಗಳ ಮೇಲೆ ವಿಚಿತ್ರವಾದ ಚಿತ್ರ ಲಿಪಿಯೊಂದರಲ್ಲಿ ಸಂದೇಶಗಳನ್ನು ಬರೆದಿರುವುದು ನಿಮಗೆ ತಿಳಿದಿರಬಹುದು. ಪಕ್ಷಿ, ಪ್ರಾಣಿ, ಮನುಷ್ಯ ಹಾಗೆ ವಿವಿಧ ಚಿತ್ರಗಳಿದ್ದ ಈ ಲಿಪಿ, ಮೊದಮೊದಲು, ಲಿಪಿಶಾಸ್ತ್ರಜ್ಞರಿಗೆ ಬಿಡಿಸಲಾಗದ ಒಗಟಾಗಿತ್ತು. 1799ರಲ್ಲಿ ಫ್ರೆಂಚ್ ಸೈನಿಕನೊಬ್ಬ, ನೈಲ್ ನದಿಯ ತೀರದಲ್ಲಿ ಅಗೆಯುತ್ತಿದ್ದಾಗ ಅವನಿಗೆ ವಿಚಿತ್ರವಾದ ಶಿಲಾಶಾಸನವೊಂದು ಸಿಕ್ಕಿತಂತೆ. ಇದರಲ್ಲಿ ಮೂರು ಭಾಗಗಳು. ಮೇಲಿನ ಭಾಗದಲ್ಲಿ ಈಜಿಪ್ಶಿಯನ್ ಚಿತ್ರಲಿಪಿಯಲ್ಲಿ ಅನೇಕ ಸಾಲುಗಳು. ಮಧ್ಯೆ ಇನ್ಯಾವುದೋ ಭಾಷೆಯಲ್ಲಿ ಇನ್ನೂ ಹಲವು ಸಾಲುಗಳು ಇದ್ದವು. ಕೆಳಗಿನ ಭಾಗದಲ್ಲಿ ಹಳೆಯ ಗ್ರೀಕ್ ಲಿಪಿಯಲ್ಲಿ ಒಂದು ಸಂದೇಶ. ಷಾಂಪೋಲಿ ಎಂಬ ಭಾಷಾ ತಜ್ಞ ಇವು ಮೂರೂ ಒಂದೇ ಸಂದೇಶವಿರಬೇಕೆಂದು ಸರಿಯಾಗಿ ಊಹಿಸಿ, ಚಿತ್ರ ಲಿಪಿಯ ಸಮಸ್ಯೆಯನ್ನು ಬಿಡಿಸಿದನಂತೆ. ಸೇಗನ್ ಇದನ್ನೆಲ್ಲಾ ವಿವರಿಸುತ್ತಿದ್ದಾಗ ಒಂದು ಅದ್ಭುತವಾದ ಪತ್ತೇದಾರಿ ಕಥೆಯನ್ನು ಕೇಳಿದಂತೆ ಭಾಸವಾಗಿತ್ತು.

ಕಾರ್ಲ್‌ಸೇಗನ್, ವೃತ್ತಿಯಲ್ಲಿ ಖಗೋಳಜ್ಞನಾದರೂ, ಪ್ರವೃತ್ತಿಯಲ್ಲಿ ವಿಜ್ಞಾನದ ಕೌತುಕಮಯ ಸಂಗತಿಗಳನ್ನು ಜನಸಾಮಾನ್ಯರಿಗೆ ಮುಟ್ಟಿಸುವ ಕೆಲಸದಲ್ಲಿ ಆಸಕ್ತಿ ಹೊಂದಿದ್ದ. ಈತ ಬರೆದಿದ್ದ ಸೈ-ಫೈ ಕಾದಂಬರಿ ''ಕಾಂಟಾಕ್ಟ್'' ನಿಜಕ್ಕೂ ಒಂದು ಅತಿ ರಮ್ಯತೆಯಿಂದ ಹೆಣೆದ ವೈಜ್ಞಾನಿಕ ಕಥೆ.

ಬೇರೊಂದು ನೀಹಾರಿಕೆಯಿಂದ ಬುದ್ಧಿಜೀವಿಗಳು, ಭೂಮಿಯಲ್ಲಿನ ನಮ್ಮನ್ನು ಸಂಪರ್ಕಿಸುವ ಸಂಗತಿ ಈ ಪುಸ್ತಕದ ಕಥಾವಸ್ತು. ಕಾದಂಬರಿಯ ಕೊನೆಯಲ್ಲಿ ಪೈ ಸಂಖ್ಯೆಯ ಪ್ರಸ್ತಾಪ ಬರುತ್ತದೆ. ಪೈ ಎಂದರೆ 22/7 ಎಂದು ಸ್ಥೂಲವಾಗಿ ಹೇಳುತ್ತಾರಲ್ಲವೇ. ಇದರ ನಿಖರ ಮೌಲ್ಯವನ್ನು ತಿಳಿಯಲು ವಿಜ್ಞಾನಿಗಳು ಒಂದು ಕಂಪ್ಯೂಟರ್‌ಗೆ ಹೇಳುತ್ತಾರೆ. ಈ ಕಾದಂಬರಿಯಲ್ಲಿ ಆ ಕಂಪ್ಯೂಟರ್ ಬಹುಕಾಲ ಲೆಕ್ಕಾಚಾರಹಾಕಿ ಕೊನೆಗೆ ಒಂದು ಪ್ರಿಂಟ್‌ಔಟ್ ಕೊಡುತ್ತದೆ. ಅದರಲ್ಲಿ ಹಾಳೆಯ ತುಂಬಾ ಸಾಲುಸಾಲಾಗಿ ಸೊನ್ನೆಗಳು. ಸೊನ್ನೆಗಳ ನಡುವೆ ಅಲ್ಲಲ್ಲಿ 'ಒಂದು' ಸಂಖ್ಯೆ. ಈ ಸಂಖ್ಯೆಯನ್ನು ಸೊನ್ನೆಗಳ ಹಿನ್ನೆಲೆಯಲ್ಲಿ ನೋಡಿದಾಗ ಒಂದು ಪೂರ್ಣವೃತ್ತ ಕಾಣಿಸಿತಂತೆ. ಸೇಗನ್ ಇದನ್ನು "The Artists Signature" ಎನ್ನುತ್ತಾನೆ. ಗಣಿತದ ತಳಹದಿಯ ಮೇಲೆ ಸೃಷ್ಟಿಸಿರುವ ಈ ವಿಶ್ವಕ್ಕೆ ಕಲೆಗಾರನ ರುಜು ಒಂದು ಬೇಕಲ್ಲ. ಈ ಮನಮೋಹಕ ಕಲ್ಪನೆಯನ್ನು ಓದಿದಾಗ,

ಕುವೆಂಪುರವರ ''ದೇವನು ರುಜು ಮಾಡಿದನು'' ಸಾಲುಗಳು ಥಟ್ಟನೆ ನೆನಪಿಗೆ ಬಂದವು.

ಕಾರ್ಲ್ ಸೇಗನ್ ಮೊನ್ನೆ ತಾನೆ ತನ್ನ ಅರವತ್ತೆರಡನೆಯ ವಯಸ್ಸಿನಲ್ಲಿ ತೀರಿಕೊಂಡ. ಜೀವನದ ಸಾರ್ಥಕತೆಯೆಂದರೆ ಏನಿರಬಹುದೆಂದು ತೊಳಲಾಡುತ್ತಿರುವ ಎಲ್ಲರಿಗೂ ಸೇಗನ್ನನ ತುಂಬು ಜೀವನ, ನಿಜಕ್ಕೂ ಹಲವು ಉತ್ತರಗಳನ್ನು ಸೂಚಿಸಬಹುದಲ್ಲವೇ?



''ಸೀರೇ ನೀನೇ ತಗೊಂಡೆ ಅನ್ನು ಗಿಲ್ ಬಂದ್ರೆಕಷ್ಟ''

ಹು. ಶ್ರೀ. ಕಾಂಡ

ಡಾ॥ ಶರಣಬಸವೇಶ್ವರ ಅಂಗಡಿ

''ಏ ಈ ನ್ಯೂಸ್ ನೋಡಿದ್ರೇನೋ!'' ಕಿರುಚಿಕೊಂಡೇ ಒಳ ಬಂದು ಕುಕ್ಕರಿಸಿದ ವಿಶ್ವ.

''ಬಿಡೋ, ಬಿಡೋ ಎಲ್ಲಾ ಓಲ್ಡ್ನೇ, ನ್ಯೂಸ್ ಯಾವುದಿದ್ದೀತು'' ನಿಂಗನ ನಿರುತ್ಸಾಹದ ನುಡಿ.

''ಇದು ಖರೇನಾ ಹೊಸಾದೈತೋ, ಹುಚ್ಚ, ಹೊಸಾ ಸುದ್ದಿ''

''ಏ,ಏ, ಹಂಗೆಲ್ಲಾ ಹುಚ್ಚ ಗಿಚ್ಚ ಅಂತ ಬೈಬ್ಯಾಡ ನೋಡಾ ಮತ್ತs''

''ಏ ನಿನಗ್ಯಾಂವ ಬೈದಾನೋ ಮಾರಾಯಾ ನಾ ಹೇಳಿದ್ದು ಈ ನ್ಯೂಸೇ ಹುಚ್ಚ ಹೊಸದೂ ಅಂತ''

''ಏನ್ ಕನಡಾ ಮಾತಾಡ್ಲಾಕ ಹತ್ತೀಯೋ, ನೆಟ್ಟಗ ಹೊಚ್ಚ ಹೊಸಾದು ಅಂತ ಹೇಳಾಕೂ ಬರಂಗಿಲ್ಲೇನs''

''ಭಾಳ ದೊಡ್ಡ ಶ್ಯಾಣ್ಯಾ ಅಗಬ್ಯಾಡ. ಹೊಚ್ಚ ಹೊಸಾದು ಅಂತ ಅನ್ನಾಕ ನನಗೂ ಬರ್ತತಿ ಆದ್ರ ನಾ ಹೇಳೂದು ಕೇಳಿದ್ರ ನಿನಗs ತಿಳೀತತಿ ಇದು ಹುಚ್ಚು ಹೊಸಾದು ಅನ್ನೂದs ಬರೋಬರಿ ಅಂತ. ಅರ್ಥಾತ್ ಹೊಸ ಹುಚ್ಚು ಅಂತ''

ಇವರಿಬ್ಬರ ಸಂವಾದದಲ್ಲಿ ನನ್ನ ವಾದವನ್ನು ತೂರಿಸಿದೆ. ''ಬಿಡಪ್ಪಾ ನಿವ್ಯಾಕೆ ಸುಳ್ಳs ಬಡದಾಡ್ತೀರಿ. ಈಗೀಗ ಯಾರಿಗೆ ಹುಚ್ಚು, ಯಾರಿಗಿಲ್ಲ ಅಂತ ಹೇಳೂದನsss ಕಷ್ಟ. ಹೋದವರ್ಷ ಏಸೊಂದು ಹುಚ್ಚ ನೋಡೇವಿ. ನೋಡಿ ನೋಡಿ ಎಲ್ಲಾ ಹಳೇವಾಗಿ ಹೋಗ್ಯಾವ. ಇನ್ನ ಹೊಸದ್ಯಾವದಿದ್ದೀತು. ಅವೆಲ್ಲಾ ನೋಡೀನೂ ನಮ್ಮ ತಲೀ ಕೆಟ್ಟಿಲ್ಲ ಅನ್ನೂದs ದೇವರ ದಯ'' ಅಂದೆ.

''ಅದsss, ಮೊದಲು ಮಂದೀಗ ಹವಾಲಾದ ಹುಚ್ಚು ಹಿಡಿಸಿದ್ರು. ಸಿಕ್ಕ ಸಿಕ್ಕವ್ರನ್ನ ಹವಾಲಾತ್‌ನ್ಯಾಗ ಹಾಕಿ ಹವಾ ತಗದು ಲಾತಾ ಕೊಟ್ರು. ಕಡೀಗ ಆ ಹವಾಮಾನದಾಗ ಹವಾ ಎಬ್ಬಿಸಿದೋರ ಮಾನಾನs ಹೋಗೋ ಹೊತ್ತ ಬಂತು'' ನಿಂಗನ ಉವಾಚ.

''ಹೂಂ! ಅಲ್ಲಿ ಬಿಹಾರದಾಗ ಪಶುಪತಿ ಇಲಾಖೇದ (ಓಹೋ,animal Husbandry Dept.!) ಭಾನಗಡಿಯಿಂದ ಎಂಥಾವ್ರಿಗೂ ಹುಚ್ಚು ಹಿಡೀಬೇಕ ಬಿಡs. ಅಲ್ಲಿ ಎಮ್ಮಿ ಸ್ಕೂಟರ್ ಮ್ಯಾಲ ಸವಾರಿ ಮಾಡಿದ್ದಂತ. ಒಂದ ಲಾರಿ ಒಂದೇ ದಿನದಾಗ ನಾಲ್ಕು ಸಾವಿರ ಕಿ.ಮೀ. ಓಡಿತ್ತಂತ. ಏನು ಮುಂದವರದಾರಂತೀನಿ ಮಂದಿ.

ಅವರ ಕಲ್ಪನಾ ಹುಚ್ಚು ಕುದುರೀ ಹಂಗ ಓಡ್ಯೆತಿ "ಸೇರಿಸಿದ ವಿಶ್ವ." "ಅಲ್ರೋ ಅಲ್ಲಿ ಮುಖ್ಯಮಂತ್ರೀನs ಲಾಲೂ ಗೋಪಾಲ. ಅವನ ಕೃಪಾದಿಂದ ಬೊಕ್ಕಸಕ್ಕ ಬೊಕ್ಕೀ ಹಾಕಿ ಅದ್ರಾಗಿಂದ Some sum ಪತ್ತು ಗುಳುಂ ಅನ್ನಿಸಿದ್ರೆ ಅದ್ರಾಗೇನ್ ತಪ್ಪದs." ವಾದದಲ್ಲಿ ಮುಳುಗಿದ್ದ ನಮ್ಮ ಮಧ್ಯೆ ಅದ್ಯಾವಾಗ್ಲೋ ತೂರಿದ್ದ ಗುಂಡ ತನ್ನ ಮೂಗು ತೂರಿಸಿದ.

"ಅದೆಲ್ಲ ಇರವಲ್ದ್ಯಾಕ. ಅದೇನೋ ಹೊಸಾ ಹುಚ್ಚು ಅಂದ್ರಲ್ಲ. ಲಗೂನ ಬಿಡಿಸಿ ಹೇಳೋ" ಅಂದೆ.

"ನಿಮ್‌ಹ್ಯಾನ್ಸ್‌ದೊಳಗ ಇನ್‌ಮ್ಯಾಲ ಪಂಚತಾರಾ ಸೌಲಭ್ಯಗಳು. Five Star Facilities! ಮೊಳಗಿತು ವಿಶ್ವವಾಣಿ.

"ಯಾಕs ಈಗ ತಂಗಳೂರಿನ್ಯಾಗಿರಾ ಫೈವ್‌ಸ್ಟಾರ್ ಹೋಟಲ್, ಆಸ್ಪತ್ರಿ ಸಾಲಲಿಲ್ಲೇನ್ ನಮ್ಮ ಶ್ರೀಮಂತ ಹುಚ್ಚರಿಗೆ ಅಲ್ಲಲ್ಲಿ ಹು.ಶ್ರೀ. ಅರ್ಥಾತ್ ಹುಚ್ಚ ಶ್ರೀಮಂತರಿಗೆ?" ನಿಂಗನ ಪ್ರಶ್ನೆ

"ಬರೋಬರಿ ಹೇಳ್ದಿ ನೋಡ ಹುಚ್ಚ ಶ್ರೀಮಂತರು ಅಂತ. ಆದ್ರೇನು ಮಾಡಿದ್ರೂ ಹುದುಗ್ಚಾರsನs. ಹುಚ್ಚಾಪಟ್ಟಿ ಖರ್ಚು ಮಾಡೂದು, ಹುಚ್ಚಾ ಪಟ್ಟೆ ಸೆರೆ ಕುಡಿಯೂದೂ, ಕುದುರಿ ಬಾಲಕ್ಕ ರೊಕ್ಕಾಕಟ್ಟೋದು ಮಾಡಿ, ಮಾಡಿ ಕಡೀಕಿ ಹುಚ್ಚರ ಪಟ್ಟಿ ತಲೀಗ್ಹಚ್ಗೊಂಡು ಬಿಡೂದು" ವಿಶ್ವನ ವಿವರಣೆ

"ಹಂಗಾರ ನಿಮ್‌ಹಾನ್ಸ್‌ದವ್ರ ಥಿಂಕಿಂಗ್ ಬರೋಬ್ಬರಿ ಅದ ಬಿಡು ಎಲ್ಲಾ ಹುಚ್ಚಾಪಟ್ಟಿ ಮಾಡೋ ಶ್ರೀಮಂತರನ್ನ ಬಡ ಹುಚ್ಚರ ಅಥವಾ ಹುಚ್ಚ ಬಡವರಿಗಿ ಸಮ ಮಾಡಾದು ಖಂಡಿತಾ ತಪ್ಪು. ಆದಕಂತನs ಅವ್ರಿಗೇ ಬ್ಯಾರೇ ಈ ಫೈವ್ ಸ್ಟಾರ್ ಟ್ರೀಟ್‌ಮೆಂಟು" ಅಂದೆ.

"ಒಂದ್ರೀತಿಲೆ ಛಲೋನs ಆತ ಬಿಡು ಅವ್ರನ್ನ ಬ್ಯಾರೆ ಇಟ್ರ ಅವ್ರ ಹುಚ್ಚು ಬಡವರಿಗೆ ಹಿಡಿಯೊ ಅಪಾಯ ಇಲ್ಲ" ನಿಂಗನ ಯೋಚನೆ!

ಇದರ ಹಿನ್ನೆಲೀ interesting ಅದs ಕೇಳ್ರಿ. ಈಗ ಅಲ್ಲಿಗೆ ಟ್ರೀಟ್‌ಮೆಂಟಿಗಂತ ಬರುವ್ರಾಗ ಬರೇ ಇಪ್ಪತ್ತೈದು ಪರ್‌ಸೆಂಟ್ ಮಂದಿ ಸಿರಿವಂತರಂತ. ಅವ್ರಿಗೂನೂ ಬ್ಯಾರೆದವ್ರಿಗೆ ಮಾಡಿದ್ದಂಗ ರಿಯಾಯಿತಿ ದರದೊಳಗ ಚಿಕಿತ್ಸಾ ಮಾಡದು ಕಷ್ಟ ಅಂತ ಈ ವಿಶೇಷ ವ್ಯವಸ್ಥೆ. ಅಲ್ಲದs ಹೀಂಗ ರಿಯಾಯಿತಿ ರೇಟಿನಿಂದ ಪರೀಕ್ಷಾ ಮಾಡಿಸಿಗೊಂಡ ಹು.ಶ್ರೀ.ಗಳು ಚಿಕಿತ್ಸಾಕs ಮತ್ತ ಫೈವ್‌ಸ್ಟಾರ್ ಹಾಸ್ಪಿಟಲ್‌ಗೊಳಿಗೇ ಹೋಗ್ತಾರಂತ ಅವ್ರು ಹಂಗ ಮಾಡೂದನ್ನ ತಪ್ಪಿಸಬೇಕಂತ ಹೀಂಗ ಮಾಡಾಕ ಹತ್ಯಾರಂತ" ವಿವರಿಸಿದ ವಿಶ್ವ. ಬರೇ 25 ಪರ್‌ಸೆಂಟ್ ಹು.ಶ್ರೀ. ಗೋಳ? ಇದರರ್ಥ ಒಂದೋ ಶ್ರೀಮಂತರಾಗ

ಭಾಳ ಕಡಿಮೀ ಮಂದೀಗಿ ಹುಚ್ಚ ಹಿಡೀತದ ಅಥವಾ ಭಾಳಮಂದೀಗಿ ತಮಗ ಹುಚ್ಚದ ಅಂತ ಗೊತ್ತಿ ಮೋದs ಇಲ್ಲ''

''ಅಲ್ರೋ, ಸಾಪ್ಕಾರ್ರಿಗೂ ಬಡವರಿಗೂ ಒಂದs ಅಂತ ರಿಬೇಟಿನ್ಯಾಗ Treatment ಮಾಡಿದ್ರ ಶ್ರೀಮಂತರಿಗೆ ಸಿಟ್ಟು ಬರಾಂಗಿಲ್ಲೇನs. ಅದಕ್ಕs ಅವ್ರು ಅಲ್ಲಿ ತಪಾಸಣೆ ಮಾಡಿಸ್ಕೊಂಡು ಚಿಕಿತ್ಸೆಗಂತ ತಮ್ಮ ಅಂತಸ್ತಿಗೆ ಸರಿಯಾಗಿ ಬ್ಯಾರೇಕಡೆಗೆ ಮ್ಯಾಲಂತಸ್ತಿನ ರಿಪೇರಿ ಮಾಡಸ್ಕೊಳ್ಳಾಕ ಅಂತ ಹೋಗ್ತಾರ'' ಈ ಹುಚ್ಚಾಚಾರಕ್ಕ ಆಸ್ಪದಾನs ಬ್ಯಾಡ ಅಂತ ಅಲ್ಲೇ ಎಸಿ ರೂಮು, ಟಿವಿ, ಸ್ಟೀರಿಯೋ ಮ್ಯೂಸಿಕ್ ಎಲ್ಲಾ ವ್ಯವಸ್ಥಾ ಮಾಡ್ತಾರಂತ. ಅದಕ್ಕಿಂತ 24 ಕೋಟಿ ರೂಪಾಯಿ ಖರ್ಚಾಗ್ತಾವಂತ''

''ಏನಂದಿ, ಏನಂದಿ, ಟಿವಿ, ಸ್ಟೀರಿಯೋ? ಇದೊಂದು ಭಯಂಕರ ಪ್ಲಾನ್ ಅದs ಬಿಡು. ಇದು ಖರ್ಚಲ್ಲ ಇನ್‌ವೆಸ್ಟ್‌ಮೆಂಟ್ ಹೇರಳ ಲಾಭ ಗ್ಯಾರಂಟಿ! ಹು.ಶ್ರೀ. ಗೋಳ್ನ ಹುಚ್ಚರಾಗೇ ಇಡುವ ಅದರಿಂದ ಹೇರಳ ಲಾಭಗಳಿಸಲು ಕುತಂತ್ರ!''

''ಅದ್ಹ್ಯಾಂಗಪ್ಪಾ?''

''ಮತ್ತಿನ್ನೇನ. ಟಿವಿ ಅಂದಮ್ಯಾಲ ನಮ್ಮ ದೂರದರ್ಶನದ ಕಾರ್ಯಕ್ರಮ ತೋರಸೇ ತೋರಸ್ತಾರ. ಅದನ್ನ ನೋಡಿದ್ರ ಎಂಥಾವ್ರಿಗೂ ಹುಚ್ಚ ಹಿಡೀಬೇಕು. ಅಂಥಾದ್ರಾಗ ಹುಚ್ಚರಿಗಿ ಅವನ್ನ ತೋರಿಸಿದ್ರ ಮುಗದಾ ಹೋತು. ಅವರಿಗೆ ಈ ಜನ್ಮದಾಗ ಹುಚ್ಚು ಬಿಡೂದಿಲ್ಲ. ಅಕಸ್ಮಾತ್ ದೂ-ದ ದಿಂದ ತಪ್ಪಸ್ಕೊಂಡ್ರ "V'(ಕಾರ) ಚಾನಲ್, M (ad) TV, ಝೀ ಟಿವಿ. ಘೂ ಟೀವಿ ನವ್ರು ಬಿಡಬೇಕಲ್ಲ. ಈ ಚಾನೆಲ್ಲುಗಳಿಂದ ಬಚಾವಾದ್ರೂ ಚಾನಲ್ ಮ್ಯೂಸಿಕ್! ಅದ್ರಾಗ ಗಾಬರಿಯಾಗೇ ಇರ್ರಿ ಅನ್ನೂ ಸಂಗೀತ (ಅದss RAP ಹಿಂದಿಯೊಳಗ ರಹೇಂ ಆಪ್ ಪರೇಶಾನ್) ದಿಂದ ಉಳಿಯಲು ಸಾಧ್ಯವಿಲ್ಲ.'' ಸಮರ್ಥಿಸಿಕೊಂಡ ನಿಂಗ.

ಛೇ ಏನ್ ತಲೀನೋ! ಸರ್ಕಾರದವ್ರಿಗಿ ತಲೀ ಇಲ್ಲ ಅಂತೀವಿ. ನೋಡು ಎಂಥಾ ಬ್ರಿಲಿಯಂಟ್ ಪರ್ಮನೆಂಟ್-ಟ್ರೀಟ್‌ಮೆಂಟ್ ಐಡಿಯಾ. ಇದ್ರಿಂದ ಹುಶ್ರೀಗಳ ಬ್ಲಾಕ್ ಮನಿ ಗವರ್ನಮೆಂಟ್‌ಗೆ ಸತತ ಬರ್‍ತಾನs ಇರ್‍ತತಿ. Continuous unearthing of black money! ಶೀಘ್ರವೇ ದಿವಾಳಿ ಸರಕಾರ ಶ್ರೀಮಂತ ಆಗ್ತತಿ.''

''ಅಂದ್ರ ಶ್ರೀಮಂತ ಆದ ಕೂಡ್ಲೇ ಸರಕಾರಕ್ಕೂ ಹುಚ್ಚು ಹಿಡಿಯಾಂಗಿಲ್ಲ ಅನ್ನೂದು ಏನ್ ಗ್ಯಾರಂಟಿ'' ಜಾಣ ಪ್ರಶ್ನೆ.

ಉತ್ತರ ನಿಮಗೆ ಗೊತ್ತಿದೆಯೇ? ಉತ್ತರ ತಿಳಿದಿದ್ದೂ ಹೇಳದಿದ್ರೆ ನಿಮ್ಮ ತಲೆ ಸಾವಿರ ಹೋಳಾದೀತು ಎಚ್ಚರ! ಹುಷಾರ್!

ಮೂಲೇ ಕುಠಾರ

ಶ್ರೀನಿವಾಸ ವೈದ್ಯ (ಶೀನೂ)

ಅಂತೂ ಅನೇಕ ವರುಷಗಳ ಸತತ ಪರಿಶ್ರಮದಿಂದ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಘಟ್ಟಕ್ಕೆ ತಲುಪಿದಂತಾಗಿತ್ತು. ಆರೆಂಟು ಪುಸ್ತಕಗಳು ಪ್ರಕಟಗೊಂಡು ಅಲ್ಲಲ್ಲಿ ಭಾಷಣಗಳಾಗಿ ಸಾಕಷ್ಟು ಕೀರ್ತಿ ಬಂದಿತ್ತು. ಈಗಲೀಗ ಸತ್ಕಾರ ಮಾಡಿಸಿಕೊಳ್ಳುವ ಮಟ್ಟಕ್ಕೂ ಏರಿದ್ದಾಗಿದೆ. ನನ್ನ ಅಲ್ಪ ಸೇವೆಯನ್ನು ಕನ್ನಡ ಸಾರಸ್ವತ ಸಮಾಜ ಮೆಚ್ಚಿಕೊಂಡದ್ದು ನನ್ನ ಭಾಗ್ಯವೆಂದೇ ಹೇಳಬೇಕು. ಇನ್ನೇನು ಒಂದೆರಡು ಬಹುಮಾನಗಳು ಬಂದರೆ ಜೀವನ ಸಾರ್ಥಕವಾದಂತೆಯೇ!

ಈಗ 'ಇಮೇಜ' ಕಾಯ್ದುಕೊಳ್ಳುವ ಛಲ. ಭಾಷಣಗಳ ಮೇಲೆ ಭಾಷಣಗಳು ಸತ್ಕಾರಗಳ ಮೇಲೆ ಸತ್ಕಾರಗಳಾಗುತ್ತಿದ್ದರೆ ಇಮೇಜು ಕಾಯ್ದುಕೊಳ್ಳುವುದು ಸ್ವಲ್ಪ ಕಷ್ಟವೇ ಸರಿ. ಆದರೂ....

ವೇದಿಕೆಯ ಮೇಲೆ ಹೇಗೆ ವಿರಾಜಮಾನನಾಗಬೇಕು..... ಹಾರ ಹಾಕಿಸಿಕೊಳ್ಳುವಾಗ 'ಬೇಡ ಬೇಡ' ವೆನ್ನುತ್ತಲೇ ಹಾರ ಹಾಕುವವರಿಗೆ ಅನುಕೂಲವಾಗುವಂತೆ ಹೇಗೆ ತಲೆ ಬಗ್ಗಿಸಬೇಕು... ಶಾಲು ಹೊದಿಸುವಾಗ 'ಛೆ...ಛೆ' ಎನ್ನುತ್ತ ಹೇಗೆ ಭುಜಗಳನ್ನು ಆಕುಂಚನಗೊಳಿಸಬೇಕು.... ಫೋಟೋ ತೆಗೆಯುವಾಗ ಯಾವ ಪೋಸ್ ಕೊಡಬೇಕು.... ಎಷ್ಟು ಹಲ್ಲು ಕಿರಿಯಬೇಕು.... ವೇದಿಕೆಯ ಮೇಲೆ ಕುಳಿತಾಗ ಮುಂದಿನ ಸಾಲಿನಲ್ಲಿ ಕುಳಿತ ಒಬ್ಬಿಬ್ಬ ಹಿರಿಯರನ್ನು ಗುರುತಿಸಿ ಹೇಗೆ ವಿನಯದಿಂದ ನಮಸ್ಕರಿಸಬೇಕು....ಕೈ ಜೋಡಿಸಿ ನಮಿಸುವಾಗ, ಎಷ್ಟು ಡಿಗ್ರೀ ಕತ್ತು ಕೊಂಕಿಸಬೇಕು....ಯಾರಿಗೆ ಕೈ ಜೋಡಿಸಿ, ಯಾರಿಗೆ ಗೋಣು ಉಳುಕಿಸಿ, ಯಾರಿಗೆ ಕಣ್‌ಸನ್ನೆಯಿಂದಲೆ ನಮಸ್ಕರಿಸಬೇಕು..... ಈ ಚಾಕಚಕ್ಯತೆಗಳನ್ನೆಲ್ಲ ಸತತವಾಗಿ ಅಭ್ಯಸಿಸಿ ಒಂದು ಹದಕ್ಕೆ ತಲುಪಿದ್ದೆ.

ಸಭಿಕರಲ್ಲಿ ಹುಡುಗರೇ ಹೆಚ್ಚಾಗಿದ್ದರೆ ಆಟೋಗ್ರಾಫಿಗೆ ಮುರುಕುತ್ತಾರೆ. ಆಗೆಲ್ಲ ಅವರದೇ ಪೆನ್ ತಕ್ಕೊಂಡು ''ನಿನ್ನನ್ನು ನೀನು ಕಂಡುಕೋ''... ಅಂತರಾತ್ಮನ ಬೆಳಕಿನಲ್ಲಿ ಬಾಳು.... ''ಅಂತಃಸಾಕ್ಷಿಯೇ ಆಪದ್ಬಾಂಧವ''....... ''ಹೊಂದಾಣಿಕೆಯೇ ಹೋರಾಟದ ಶತ್ರು''..... ಹಿಂಗೇನಾದರೂ ಹುಚ್ಚು ಹುಚ್ಚು ಬರೆದು ಆಢ್ಯತೆಯಿಂದ ಸಹಿ ಗೀಚುವುದರಲ್ಲಿ ಏನೊಂದು ರುಚಿಯಿದೆ ಬಲ್ಲವನೇ ಬಲ್ಲ.

ಹೆಚ್ಚಾಗಿ ಈ ಸಭೆ ಸಮಾರಂಭಗಳಿಗೆಲ್ಲ ಒಂದು ನಿಶ್ಚಿತ ರೂಪ ಬಂದುಬಿಟ್ಟಿರುತ್ತದೆ.

ಮೊನ್ನೆ ಮಾತ್ರ ಯಡವಟ್ಟಾಗಿ ಹೋಯಿತು! ಹೆಚ್ಚಾಗಿ ಯುವಕರೇ ತುಂಬಿದ್ದ ಸಭೆ, ಸ್ವಾಗತ ಗೀತೆ, ಸ್ವಾಗತ ಭಾಷಣ, ಅತಿಥಿಗಳ ಪರಿಚಯ, ಬಹುಮಾನ ವಿತರಣೆ ಎಲ್ಲ ಎಂದಿನಂತೆಯೇ ಸಾಗಿತ್ತು. ನನ್ನ ಭಾಷಣವಂತೂ ಅದ್ಭುತವಾಗಿತ್ತು. ಚಪ್ಪಾಳೆಯ ಮೇಲೆ ಚಪ್ಪಾಳೆಯ ಸುರಿಮಳೆ. ಹರ್ಷೋದ್ಗಾರದ ಮಹಾಪೂರ. ಪ್ರಶ್ನೋತ್ತರ ವೇಳೆಗೆ

ಎಲ್ಲ ಪ್ರಶ್ನೆಗಳಿಗೆ ಆಪ್ಯತೆಯಿಂದ ಜಾಣಾಕ್ಷತೆಯಿಂದ ಉತ್ತರಿಸಿದೆ. ಪ್ರಶ್ನೆಗಳಾದರೂ ಎಂಥನವೇ.

''ಸರ್ ನಿಮಗೆ ಇಷ್ಟೊಂದು ಮನೋಜ್ಞವಾಗಿ ಬರೆಯಲು (ಕೆಲವು ಕಡೆ ಹೃದಯ ಸ್ಪರ್ಶಿಯಾಗಿ ಎನ್ನುತ್ತಾರೆ) ಸ್ಫೂರ್ತಿ ಎಲ್ಲಿಂದ ಬರುತ್ತದೆ?

''ನಿಮ್ಮ ಬರಹದ ವಿಧಾನ ಯಾವುದು?''

''ಮೊದಲು ಹಂದರ ಎಂದರೆ ಸ್ಕೆಲಿಟನ್ ಹಾಕಿಕೊಳ್ಳುವಿರೋ ಹೇಗೆ?''

''ಸರ್ ನಿಮಗೆ ಬಾಲ್ಯದಿಂದಲೂ ಸಾಹಿತ್ಯದಲ್ಲಿ ಆಸಕ್ತಿಯಿತ್ತೆ?''

''ನೀವು ಸಾಹಿತ್ಯ ಕ್ಷೇತ್ರಕ್ಕೆ ಪ್ರವೇಶಿಸಿದ್ದು ಹೇಗೆ?''

''ನಿಮ್ಮ ಮೆಚ್ಚಿನ ಲೇಖಕರು ಯಾರು?''

''ಇಲ್ಲಿಯ ವರೆಗೆನ ನಿಮ್ಮ ಶ್ರೇಷ್ಠ ಕೃತಿ ಯಾವುದು?''

''ನಿಮ್ಮ ಸೃಜನಾತ್ಮಕ ಬರವಣಿಗೆಯಲ್ಲಿ (ನಾ ಏನು ಕಿರಾಣಿ ಅಂಗಡಿ ಲೆಖ್ಖ ಬರೀತೀನೇನು)ನಿಮ್ಮ ಅರ್ಧಾಂಗಿಯ ಪಾತ್ರವೇನು?'' ಹೆಚ್ಚಾಗಿ ಎಲ್ಲ ಕಡೆಗೆ ಇದು ಕೊನೆಯ ಪ್ರಶ್ನೆಯಾಗಿರುತ್ತದೆ ಮತ್ತು ಈ ಪ್ರಶ್ನೆಗೆ ''ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ'' ಎಂದೇ ಉತ್ತರಿಸಬೇಕೆಂದು ಸರಕಾರದವರು ಕಟ್ಟಪ್ಪಣೆ ಮಾಡಿರುತ್ತಾರೆ.

ಒಂದು ವೇಳೆ ಯಾರಾದರೂ ''ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ. ಆದರೂ ಆ ಪುರುಷ ಯಶಸ್ವಿಯಾಗುತ್ತಾನೆ'' ಎಂದು ಉತ್ತರಿಸಿದರೆ ಇಂದಿನ ದಿನಗಳಲ್ಲಿ ಏನಾದೀತೋ?

ಅವತ್ತು ಈ ಕೊನೆಯ ಪ್ರಶ್ನೆಯಾಯಿತು. ಕಾರ್ಯದರ್ಶಿಗಳು ವಂದನಾರ್ಪಣೆ ಮಾಡುವವರಿಗೆ ಕಣ್ಸನ್ನೆ ಮಾಡಿದರು. ಅವರು ಮೆಲ್ಲನೇ ನಡೆದುಬಂದು ''ಆಭಾರ ಮನ್ನಣೆಯಂತಹ ಅತಿ ಮಹತ್ವದ ಹಾಗೂ ಹೆಮ್ಮೆಯ ಕಾರ್ಯವು ತಮ್ಮ ಪಾಲಿಗೆ ಬಂದದ್ದು ತಮ್ಮ ಏಳು ಜನುಮದ ಸುಕೃತ ಫಲ....'' ಇತ್ಯಾದಿ ಇತ್ಯಾದಿಯಾಗಿ ಇನ್ನೇನು ಮುಕ್ಕಾಲು ಗಂಟೆ ಕೊರೆಯಲು ಪ್ರಾರಂಭಿಸಬೇಕು, ಅಷ್ಟರಲ್ಲಿ ಮುಂದಿನಿಂದ ಎಡಗಡೆಗೆ ಎರಡನೆಯ ಸಾಲಿನಲ್ಲಿ ಒಬ್ಬ ತರುಣಿ ಎದ್ದು ''ಸರ್... ಒಂದು ಪ್ರಶ್ನೆ'' ಎಂದಳು. ಕಾರ್ಯದರ್ಶಿಗಳು ನನ್ನ ಕಡೆ ನೋಡಿದರು, ನಾನು 'ಆಗಲಿ ಅದಕ್ಕೇನು' ಎಂಬಂತೆ ಭುಜ ಹಾರಿಸಿದೆ. ಕಾರ್ಯದರ್ಶಿಗಳು 'ಈಗಾಗಲೇ ಸಾಕಷ್ಟು ಸಮಯವಾಗಿದೆ... ಶ್ರೀಯುತರ ಸಮಯಕ್ಕೂ ಬೆಲೆಯಿದೆ(!)....'' ಎಂಬ ರೆಕಾರ್ಡ್ ಹಾಕಿ.... ''ಇದು ಕೊನೆಯ ಪ್ರಶ್ನೆ... ನಿಜವಾಗಿಯೂ ಕಟ್ಟಕಡೆಯ ಪ್ರಶ್ನೆ'' ಎಂದು ಅಪ್ಪಣೆ ಕೊಡಿಸಿದರು.

ತರುಣಿ ನನ್ನ ಕಡೆ ನೋಡಿ ಕಣ್ಣಿಂದಲೇ ''ಕೇಳಲೇ?'' ಎಂದಳು ನಾನು ''ಕೇಳಿ... ಕೇಳಿ... ಏನಿದ್ದರೂ ಕೇಳಿ... ಸಂಕೋಚಪಟ್ಟುಕೊಳ್ಳಬೇಡಿ'' ಎಂದೆ. ತರುಣಿ ಕೇಳಿದಳು ''ಸರ್ ನೀವು ಯಾಕೆ ಬರೆಯುತ್ತೀರಿ?''

ಸಭಿಕರ ಹಕ್ಕು

ಪ್ರಭು

ಚಾತುರ್ವರ್ಣಂ ಮಯಾಸೃಷ್ಟಂ ಗುಣಕರ್ಮವಿಭಾಗಶಃ ಎಂಬ ಗೀತಾ ವಾಕ್ಯದಂತೆ, ಪ್ರಪಂಚದಲ್ಲಿರುವ ಮನುಷ್ಯರನ್ನೆಲ್ಲಾ ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು. ಒಂದು) ಭಾಷಣಕಾರರು, ಮುಖ್ಯ ಅತಿಥಿಗಳು, ಎರಡು) ಸಭಿಕರು, ಮೂರು) ಈ ಎರಡೂ ವರ್ಗಕ್ಕೆ ಸೇರದವರು, ನಾಲ್ಕು) ಈ ಮೂರು ವರ್ಗಕ್ಕೆ ಸೇರದವರು. ಪ್ರತಿಯೊಂದು ವರ್ಗಕ್ಕೂ ತನ್ನದೇ ಆದ ಹಕ್ಕುಗಳಿರುತ್ತವೆ. ಮೊದಲ ವರ್ಗಕ್ಕೆ ಭಾಷಣ ಮಾಡುವ ಹಕ್ಕಿದ್ದರೆ, ಉಳಿದ ವರ್ಗಗಳಿಗೆ ನಿದ್ದೆ ಮಾಡುವ ಹಕ್ಕಿರುತ್ತದೆ. ಸಭೆಯಲ್ಲಿ ನಿದ್ದೆಮಾಡುವ ಸಭಿಕನಷ್ಟು ಸುಖಿ ಈ ಜಗತ್ತಿನಲ್ಲಿ ಬೇರೆ ಯಾರಿದ್ದಾರೆ? ವೇದಿಕೆಯ ಮೇಲೆ ಕೂತೂ ಸಭಿಕನಂತೆ ನಿದ್ದೆ ಮಾಡುವವರು ಹಲವಾರು ಕಣ್ಣುಗಳಿಗೆ ಗೋಚರವಾಗಿ ಹಕ್ಕು ಬಾಧ್ಯತಾ ಚ್ಯುತಿ ದೋಷ ಹಾಗೂ ಔಚಿತ್ರ ಪ್ರಜ್ಞಾಭಾವ ದೋಷಕ್ಕೆ ಒಳಗಾಗುತ್ತಾರೆ. ಆದ್ದರಿಂದ ಗುಣಕರ್ಮವಿಭಾಗಕ್ಕನುಗುಣವಾಗಿ ವೇದಿಕೆಯ ಮೇಲಿರುವವರು ಸಭಿಕರ ಹಕ್ಕುಗಳಿಗೆ ಆಸೆ ಪಡದೆ ಜಾಗ್ರತೆಯಿಂದಿರಬೇಕು. ಸಭೆಯಲ್ಲಿ ಜನಜಂಗುಳಿಯ ಮಧ್ಯೆ ನುಸುಳಿಕೊಂಡು ಅಥವಾ ಯಾವುದೇ ಮೂಲೆಯಲ್ಲಿ ಮುದುಡಿಕೊಂಡು ನಿದ್ದೆ ಮಾಡುವ ಭಾಗ್ಯ ಸಭಿಕರಿಗೇ ಮೀಸಲಾಗಿರಲಿ ಎಂದು ಇತ್ತೀಚೆಗೆ ಯಾವುದೇ ಪ್ರಚಾರ ಮಾಧ್ಯಮಗಳ ಬಾಯಿಗೆ ತುತ್ತಾಗದೆ ನಡೆದ ಅಖಿಲ ಭಾರತ ಸಭಿಕರ ಮಹಾಸಮ್ಮೇಳನದಲ್ಲಿ ಠರಾವು ಪಾಸಾಯಿತಂತೆ. ಈ ಸಮ್ಮೇಳನ ಯಾಕೆ ನಡೆಯಿತೆಂದರೆ, ಇತ್ತೀಚೆಗೆ ಪ್ರಧಾನಿಗಳೇ ವೇದಿಕೆಯ ಮೇಲೆ ಕೂತು ತೂಕಡಿಸುವ, ಭುಜದ ಮೇಲೆ ಚೆಂಡು ಚೆಲ್ಲಿ ಹಿತವಾಗಿ ನಿದ್ರಾಲೋಕದಲ್ಲಿ ವಿಹರಿಸುವ ಚಿತ್ರಗಳು ಪತ್ರಿಕೆಗಳಲ್ಲಿ ಬಂದಮೇಲೆ ಎಚ್ಚೆತ್ತ ಸಭಿಕರು ಇನ್ನು ತಾವು ಸುಮ್ಮನಿರುವುದು ಸಲ್ಲ ಎಂದು ಸಮ್ಮೇಳನ ನಡೆಸಿದರಂತೆ,. ನೋಡಿದಿರಾ, ಸಭಿಕರು ಎಚ್ಚೆತ್ತು ಜಾಗ್ರತರಾಗಿದ್ದಾರೆ ಎಂದರೆ ಅವರ ಹಕ್ಕು ಚ್ಯುತಿಯಾದಂತೆ ಎನಿಸುವುದಿಲ್ಲವೆ? ಅದೇ ಸಮ್ಮೇಳನದಲ್ಲಿ ಒಂದು ಗುಪ್ತ ಸಮಿತಿ ರಚಿತವಾಗಿ ಪ್ರಧಾನಿಗಳು ತಮ್ಮ ಮೇಲೆ ಹೇರಲಾದ ನಿದ್ರಾರೋಪವನ್ನು ಖಂಡಿಸಿ, ತಾವು ನಿಜವಾಗಲೂ ದೇಶದ, ದೀನದಲಿತರ ಬಗ್ಗೆ ಯೋಚಿಸುತ್ತಿರುತ್ತೇನೆ, ಖಂಡಿತಾ ನಿದ್ರೆ ಮಾಡುತ್ತಿರುವುದಿಲ್ಲ ಎಂದು ಹೇಳಿಕೆ ಕೊಟ್ಟಿರುವುದನ್ನು ಕೂಲಂಕುಷವಾಗಿ ವಿಚಾರಣೆ ಮಾಡುವ ಹೊಣೆ ಹೊತ್ತಿದೆ ಎಂದು ಸಮ್ಮೇಳನದಿಂದ ಹಿಂದಿರುಗಿದ ಅಜ್ಞಾತವಾಗಿರಬಯಸುವ ಮೂಲಗಳು ಬಹಿರಂಗಪಡಿಸಿವೆ. ಇಲ್ಲಿಯವರೆಗೆ ತಿಳಿದ ಮಟ್ಟಿಗೆ, ಮೊದಲು ಈ ಸಂಶೋಧಕ ಕೆಲಸವನ್ನು ಸಿ. ಬಿ. ಐ. ಗೆ ಹೇಗಾದರೂ ಮಾಡಿ ಒಪ್ಪಿಸಬೇಕೆಂದು ಆಲೋಚಿಸಲಾಗಿತ್ತು. ಆದರೆ, ಅದರ ವರದಿ ಬರುವುದಕ್ಕೆ ಅನೇಕ ದಶಕಗಳೇ ಹಿಡಿಯಬಹುದೆಂದು ಶಂಕಿಸಿ, ಆ ವೇಳೆಗೆ ಬೇರೆಲ್ಲಾ ಮಹತ್ವದ ವಿಷಯಗಳಂತೆ, ಈ ವಿಷಯವೂ ಅಪ್ರಸ್ತುತವಾಗಿಬಿಡಬಹುದು ಎಂದು ಸಕಾರಣವಾಗಿ ತರ್ಕಿಸಿ, ಗುಪ್ತ ಸಮಿತಿಯ ಸಭಿಕ

ಸದಸ್ಯರೇ ಉಪಾಯಾಂತರದಿಂದ ಸತ್ಯಶೋಧನೆ ಮಾಡತಕ್ಕದ್ದೆಂದು ವಿವೇಕಯುತ ನಿರ್ಣಯ ಕೈಗೊಳ್ಳಲಾಯಿತು. ಹೀಗಾಗಿ ಮಾರು ವೇಷಧರಿಸಿದ ಸಭಿಕರು ಪ್ರಧಾನಿಗಳು ಉಪಸ್ಥಿತರಿರಬಹುದಾದ ಸ್ಥಳಗಳಿಗೆ ತೆರಳಿ ಸುರಕ್ಷತಾ ಬೇಲಿಯೊಳಗೆ ಚಾಣಾಕ್ಷತನದಿಂದ ನುಸಿಳಿ ಅವರನ್ನೇ ಖುದ್ದಾಗಿ ಭೇಟಿಯಾಗಿ ನಡೆಸಿದ ಒಂದಾನೊಂದು ಸಂದರ್ಶನದ ಧ್ವನಿ ಮುದ್ರಣದ ಪಾಠ ಗ್ರೇಪ್‌ವೈನ್ ದ್ವಾರಾ ಲಭ್ಯವಿದ್ದು ಸತ್ಯಶೋಧನೆಯ ಪ್ರಗತಿಯ ಒಂದು ಮಗ್ಗುಲನ್ನು ತೋರಿಸುತ್ತದೆ. ಬೇರೆಲ್ಲಾ ಸಾಂದರ್ಭಿಕ ಮತ್ತು ಔಪಚಾರಿಕ ಹಾಗೂ ತಾಂತ್ರಿಕ ಮಾತುಕತೆಗಳನ್ನು ಬದಿಗಿಟ್ಟು ಮುಖ್ಯ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೋತ್ತರಗಳನ್ನು ಮಾತ್ರ ಕೊಡಲಾಗಿದೆ. ಪ್ರಧಾನಿಗಳನ್ನು ಯಾರು, ಹೇಗೆ, ಎಲ್ಲಿ ಭೇಟಿಯಾಗಿ ಸಂದರ್ಶನ ಮಾಡಿದರು ಎಂಬ ಕಾಲದೇಶನಾಮ ವಿವರಗಳನ್ನು ಯಾಕೆ ಕೊಟ್ಟಿಲ್ಲವೆಂಬುದು ಸ್ಪಷ್ಟವೇ ಇದೆ.

ಪ್ರಶ್ನೆ: ನೀವು ದಿನಕ್ಕೆಷ್ಟು ಗಂಟೆಗಳ ಕಾಲ ಕೆಲಸ ಮಾಡುತ್ತೀರಿ?

ಉತ್ತರ: 18 ರಿಂದ 20. ಈಗಾಗಲೇ ಎಲ್ಲಾ ಪೇಪರ್‌ಗಳಲ್ಲೂ ಬಂದಿದೆ ನೋಡಿ

ಪ್ರ: ಉಳಿದ 6 ರಿಂದ ನಾಲ್ಕು ಗಂಟೆಗಳ ಕಾಲ ಏನು ಮಾಡುತ್ತೀರಿ?

ಉ: ಕೆಲಸ....

ಪ್ರ: ಆಂ?

ಉ: ಅಲ್ಲ, ಅಲ್ಲ, ವಿಶ್ರಾಂತಿ

ಪ್ರ: ಏನೂ ತಪ್ಪಿಲ್ಲ ಅಷ್ಟೊಂದು ಕೆಲಸ ಮಾಡುವಾಗ ನಿಮಗೆ ನಿದ್ದೆಯ ಅಭಾವದಿಂದ ಬಳಲಿಕೆ....?

ಉ: ಇಲ್ಲ, ಹಾಗೇನೂ ಆಗೋದಿಲ್ಲ, ನಿಜ ಹೇಳಬೇಕೂಂದ್ರೆ, ನಿದ್ದೇನೂ ಒಂದು ಕೆಲಸ ಅಂತಾನೇ ಮಾಡ್ತೀನಿ....

ಪ್ರ: ಅಂದ್ರೆ ವೇದಿಕೆ ಮೇಲೆ....

ಉ: ನಾನಾಗ್ಲೇ ಹೇಳಿದೀನಿ, ದೇಶದ ಪ್ರಗತಿ, ದೀನ ದಲಿತರ ಉದ್ಧಾರದ ಬಗ್ಗೆ ಗಂಭೀರವಾಗಿ ಯೋಚಿಸ್ತೀನಿ.

ಪ್ರ: ಅಂದ್ರೆ ದಿನದ 18 ರಿಂದ 20 ಗಂಟೆ ಕೆಲಸ ಮಾಡೋವಾಗ ಈ ವಿಷಯಕ್ಕೆ ಟೈಂ ಸಿಕ್ಕೋದಿಲ್ವೇ?

ಉ: ರ್‍ರೀ, ನಿಮಗೆ ರಾಜಕೀಯದ ಗಂಧಗಾಳೀನಾದ್ರೂ ಇದ್ಯೇನ್ರೀ?

ಪ್ರ: ಕ್ಷಮಿಸಿ....

ಉ: ದೇಶದ ಪ್ರಧಾನಿಯಗಿ ಕೆಲಸ ಮಾಡೋದು ಅಂದ್ರೆ, ಸರಿಯಾಗಿ ಗಮನಿಸಿ ನಾ ಹೇಳ್ತಿರೋ ಮಾತುಗಳನ್ನು, ದೇಶದ ಪ್ರಧಾನಿಯಾಗಿ... ಸರಿಯಾಗೇ ಹೇಳಿದೀನಿ....

ಪ್ರ: ಹೌದ್ಹೌದು... ತಾವು ದೇಶದ ಪ್ರಧಾನಿಯಾಗಿ, ವೇದಿಕೆಮೇಲೆ ಕೂತು ದೇಶದ ಬಗ್ಗೆ ದೀನ ದಲಿತರ ಬಗ್ಗೆ ಗಂಬೀರವಾಗಿ ಚಿಂತಿಸಿ, ಅದೂ ಒಂದು ಕೆಲಸ ಅನ್ನೋ ರೀತಿಯೇ.... ಸರಿ. ಹೀಗೆ ನೀವು ದಿನದ 24 ಗಂಟೇನೂ ಕೆಲಸ ಮಾಡ್ತಿದ್ರೆ ನಿಮಗೆ ವಿಶ್ರಾಂತಿ...

ಉ: ವಿಶ್ರಾಂತಿ ಯಾರಿಗ್ರೀಬೇಕು? ಹೀಗೆ ಕೆಲ್ಸ ಮಾಡಿದ್ರೇನೇ ದೇಶ ಉದ್ಧಾರವಾಗೋದು. ಇಲ್ದಿದ್ರೆ ದೇಶ ಹಾಳಗಿ ಹೋಗುತ್ತೆ. ನಾನು ಸಮಯಕ್ಕೆ ಸರಿಯಾಗಿ ಪ್ರಧಾನಿಯಾಗಿ ಬಂದೆ, ಸರಿಯಾಯ್ತು. ನಾನೇನೂ ಇದನ್ನು ಬಯಸಿರಲಿಲ್ಲ ಅಧಿಕಾರ ತಾನೇ ತಾನಾಗಿ ಬಂತು. ನಾನು ಇಂಥ ಜವಾಬ್ದಾರಿಗಳಿಗೆಲ್ಲಾ ಹೆದರಿಕೊಂಡು ಓಡಿ ಹೋಗೋನಲ್ಲ.

ಪ್ರ: ಸಭೆಗಳಲ್ಲಿ ನೀವು ಸಭಿಕರ ಹಕ್ಕನ್ನು ನಿಮ್ಮದೇ ಹಕ್ಕೆಂಬಂತೆ ಪ್ರಯೋಗಿಸ್ತೀರ ಅಂತ ಅಖಿಲಭಾರತ ಸಭಿಕರ ಮಹಾಧಿವೇಶನದಲ್ಲಿ ಆರೋಪಿಸಿದ್ದಾರಲ್ಲಾ?

ಉ: ನೋಡಿ, ನಾನಾಗ್ಲೇ ಹೇಳಿದೀನಿ, ನಾನು ದೇಶದ ಪ್ರಗತಿ, ದೀನದಲಿತರ ಉದ್ಧಾರ.. ಅವರಿಗೆ ಬುದ್ಧಿ ಇಲ್ಲ!

ಪ್ರ: ಸರಿ ಸರಿ, ಕ್ಷಮಿಸಿ..... ಆದ್ರೂ .... ಏನಪ್ಪಾಂದ್ರೇ....

ಉ: ನನಗೆ ಕೆಲಸಾನೇ ವಿಶ್ರಾಂತಿ, ವಿಶ್ರಾಂತೀನೆ ಕೆಲಸ..... ನಾನು ಇಷ್ಟೊಂದು ಕೆಲಸ ಮಾಡ್ದೆ ಇದ್ರೆ ನನಗೆ ನಿದ್ದೇನೇ ಬರೋದಿಲ್ಲ...

ಪ್ರ: ಈಗ ಚೆನ್ನಾಗಿ ನಿದ್ರೆ ಬರ್ತಿದೆಯೋ ಹೇಗೆ?

ˣಉ:

ಪ್ರ : ಸರಿ, ಗೊತ್ತಾಯ್ತು

ˣ ಮುಂದಿನ ಪ್ರಶ್ನೆಯ ವರೆಗೂ ಖಾಲಿ ಟೇಪು ತಿರುಗಿದ ಶಬ್ದ

'ಚೆಕ್ಕಾಯಣ'

ಲೀಲಾಶೇಖರ್

ನಮ್ಮ ಗೌರೂಗೆ ಒಂದು ತಿಂಗಳ ಟೆಂಪರರಿ ಕೆಲಸ ಒಂದು ಕಂಪೆನಿಯಲ್ಲಿ ಸಿಕ್ಕಿತು. ಸಂಬಳವನ್ನು ಆತುರದಿಂದ ಎದುರು ನೋಡುತ್ತಿದ್ದಳು. ಬಂದ ತಕ್ಷಣ ಹಾಗೆ ಮಾಡ್ತೀನಿ, ಹೀಗೆ ಮಾಡ್ತೀನಿ ಅಂತ ಯೋಜನೆಗಳನ್ನು ಹಾಕಿದ್ದೂ ಹಾಕಿದ್ದೆ. ಯಾರಿಗೆ ಆಗಲಿ ತಮ್ಮ ಮೊದಲನೆ ಸಂಬಳ ಅಂದ್ರೆ ತುಂಬಾ ಹೆಮ್ಮೆ ಅಲ್ಲವೆ? ಆದರೆ ಪಾಪ, ಸಂಬಳ ಬರೋದಿವಸ ಅವಳ ಬಾಸ್ ಎಲ್ಲೋ ಹೋಗಿದ್ದರಿಂದ 'ನಾಳೆ ಬಂದು ತೆಗೆದುಕೊಳ್ಳಿ' ಎಂದರಂತೆ - ಮತ್ತೆ ಯಾರು ಅಷ್ಟು ದೂರ ಬರ್ತಾರೆ ಅಂತ ಅವಳು ಮಲ್ಲೇಶ್ವರದಲ್ಲೇ ಇದ್ದ ಅವಳ ಕಜಿನ್ ಓಂಕಾರ್‌ಗೆ ಸಂಬಳ ತಗೊಂಡು ತಕ್ಷಣ ತಲುಪಿಸುವಂತೆ ಹೇಳಿದ್ದಳು. ಆದೇ ರೀತಿ ಮಾರನೇ ದಿನ ಆ ಕಂಪೆನಿಗೆ ಹೋಗಿ ಚೆಕ್ (2000 ರೂ.) ತಗೊಂಡು ಬೆಳಗ್ಗೆ ಗೌರೂಗೆ ತಲುಪಿಸೋಣವೆಂದುಕೊಂಡ. ಅನಿರೀಕ್ಷಿತವಾಗಿ ಮೈಸೂರಿನಿಂದ ಗೌರು ಅಣ್ಣ ಅತ್ತಿಗೆ ಮಲ್ಲೇಶ್ವರದ ವೀಣಾನ ಮನೆಗೆ ಬಂದರು. ಬೆಳಗ್ಗೆಯೇ ಗೌರೂ ಮನೆಗೆ ಹೋಗ್ತೀನಿ ಅಂತ ಹೇಳಿದ್ದರಿಂದ ಓಂಕಾರ್ ಶ್ರೀಕಾಂತ್ ಕೈಯಲ್ಲಿ ಚೆಕ್ ಕೊಟ್ಟು ಭದ್ರವಾಗಿ ಗೌರೂಗೆ ತಲುಪಿಸುವಂತೆ ಕೇಳಿಕೊಂಡ. 'ನನಗೆ ಮರೆವು ಜಾಸ್ತಿ, ನಿನ್ನ ಪರ್ಸಿನಲ್ಲೇ ಜೋಪಾನವಾಗಿಡು. ಬೆಳಗ್ಗೆ ಗೌರೂಗೆ ತಲುಪಿಸೋಣ' ಅಂದ ಶ್ರೀಕಾಂತ್. ನಮ್ಮ ಶ್ರೀಕಾಂತ್ ಭೋಜನ ಪ್ರಿಯ. ಬೆಳಿಗ್ಗೆ ಎದ್ದು ಭರ್ಜರಿಯಾಗಿ ''ಸೌತೆಕಾಯಿ ಹಾಕಿ ಅಕ್ಕಿರೊಟ್ಟಿ, ಕಾಯಿಚಟ್ನಿ, ಮಾವಿನಹಣ್ಣಿನ ಸೀಕರಣೆ ಮಾಡುವಂತೆ ವೀಣಾಗೆ ಹೇಳಿದಲ್ಲದೆ ತಾನೇ ರೊಟ್ಟಿ ತಟ್ಟಿದ. ತಿಂಡಿತಿಂದು ಡ್ರೆಸ್ ಮಾಡ್ಕೊಂಡು ಗೌರೂ ಮನೆಗೆ ಹೊರಟರು.

''ಪರ್ಸ್ ತುಂಬಾ ಬಾರ.... ವೀಣಾ ಇಲ್ಲೇ ಇರಲಿಕಣೆ ನಾಳೆ ತಗೊಂಡು ಹೋಗ್ತೀನಿ'' ಅಂತ ಪರ್ಸನ್ನು ವೀಣಾಳ ಮನೇಲೆ ಬಿಟ್ಟು ಹೋದಳು ಜ್ಯೋತಿ. ಚೆಕ್ ಭದ್ರವಾಗಿ ಜ್ಯೋತಿ ಪರ್ಸಿನಲ್ಲಿ ವೀಣಾನ ಡ್ರೆಸಿಂಗ್ ಟೇಬಲ್ ಮೇಲೆ ಕುಳಿತಿತ್ತು. ಯಾರಿಗೂ ಚೆಕ್ ಜ್ಞಾಪಕವೇ ಬರಲಿಲ್ಲ. ಗೌರೂ ಶ್ರೀಕಾಂತ್ ಚೆಕ್ ತರದಿದ್ದಾಗ ವೀಣಾಗೆ ಫೋನ್ ಮಾಡಿ ''ಪ್ಲೀಸ್ ಮರೀದೇ ಸಂಜೆ ಓಂಕಾರ್ ಕೈಯ್ಯಲ್ಲಿ ಕಳಿಸಿಕೊಡೆ'' ಎಂದಳು. ವೀಣಾ ಏನೋ ಓ.ಕೆ. ಅಂದಳು. ಆದರೆ ಓಂಕಾರ್ ಆದಿನ ಕೆಲಸದಿಂದ ಬಂದಾಗ ರಾತ್ರಿ ಹತ್ತು ಘಂಟೆಯಾಗಿತ್ತು. ಅವನು ಬರೋ ಹೊತ್ತಿಗೆ ರವಿ ಆಗ್ರಾದಿಂದ ಬಂದಿದ್ದ. ಅದೂ ಇದೂ ಮಾತನಾಡ್ತಾ ಗೌರೂ ಫೋನ್ ಮಾಡಿದ್ದ ವಿಷಯವನ್ನೇ ಮರೆತಳು. ಬೆಳಿಗ್ಗೆ ಶ್ರೀಕಾಂತ್ ಜ್ಯೋತಿ ಬಂದಾಗಲೆ ನೆನಪು. ನನ್ನ ಪರ್ಸಿನಲ್ಲಿ ಭದ್ರವಾಗಿದ್ದ ಚೆಕ್ ಕವರನ್ನು ಓಂಕಾರ್ ಕೈಯಲ್ಲಿ ಕೊಟ್ಟು ''ಏ ಗೌರೂಗೆ ತುಂಬಾ ಕೋಪ ಬಂದಿದೆಕಣೋ ಮೊದ್ಲು ತಲುಪಿಸು'' ಅಂದಾಗ ಅಲ್ಲೇ ಇದ್ದ ರವಿ 'ನಂಗೆ ಕೊಡೋ... ನಾನು ಹೇಗೂ ವಿ.ವಿ. ಪುರಂಗೆ ನಮ್ಮತ್ತೆ ಮನೆಗೆ ಹೋಗ್ತೀನಿ. ದಾರೀಲಿ ಗೌರೂನೂ ನೋಡ್ಕೊಂಡು ಚೆಕ್

ಕೊಟ್ಟು ಹೋಗ್ತೀನಿ' ಅಂದಾಗ 'ಏಯ್ ಮರೀದೇ ಕೊಡಪ್ಪ. ಇಲ್ಲದಿದ್ದರೆ ಗೌರು ನನ್ನ ಜಾನ್ ನಿಕಾಲ್ ಮಾಡಿಬಿಡ್ತಾಳೆ' ಅಂತ ರವಿಗೆ ಹತ್ತು ಬಾರಿ ಹೇಳಿದ. ಓಂಕಾರ್ ರಾತ್ರಿ ತಿರುಪತಿಗೆ ಒಟ್ಟಿಗೆ ಹೋಗೋಣ. ಈಗ ಹೋಗಿ ರಿಸರ್ವ್ ಮಾಡಿಸ್ತೀನಿ. ನೀವು ಮೈಸೂರಿಗೆ ಹೋಗ್ಬೇಡಿ' ಅಂತ ಶ್ರೀಕಾಂತ್ ಜ್ಯೋತಿನ ಅಲ್ಲೇ ಉಳಿಸಿಕೊಂಡ ರವಿ.

ಮರೀದೇನೆ ಚೆಕ್ ಜೇಬಲ್ಲಿಟ್ಟುಕೊಂಡು ವಿ.ವಿ. ಪುರಂಗೆ ಹೋದ. ಆಗ್ರಾ ಸಮಾಚಾರ, ಅದೂ ಇದೂ ಮಾತನಾಡುತ್ತಾ ಹನ್ನೆರಡು ಘಂಟೆ ಆಯ್ತು. ಊಟಕ್ಕೆ ಕುಳಿತುಕೊಳ್ಳಲು ಶರಟು ಬಿಚ್ಚಿದವನು ಜೇಬಿನಲ್ಲಿಟ್ಟಿದ್ದ ಚೆಕ್ ಕವರ ತೆಗೆದು ಟೆಲಿಫೋನ್ ಪಕ್ಕದಲ್ಲಿಟ್ಟಿದ್ದ. ಊಟ ಆದ ತಕ್ಷಣ ತಿರುಪತಿಗೆ ಜಾಗ ರಿಸರ್ವ್ ಮಾಡಿಸಬೇಕು ಅಂತ ಅರ್ಜೆಂಟ್ ಆಗಿ ಭಾವಮೈದ ರಾಜೀವ್ ಜೊತೆ ಸ್ಕೂಟರಿನಲ್ಲಿ ಹೊರಟೇಬಿಟ್ಟ. ಚೆಕ್ ಮತ್ತೆ ಫೋನ್ ಟೇಬಲ್ಲಿನ ಮೇಲೆ ಜೋಪಾನವಾಗಿ ಕುಳಿತಿತ್ತು. ರವಿ ರಿಸರ್ವ್ ಮಾಡಿಸಿಕೊಂಡು ಬರ್‍ತಾ ದಾರೀಲಿ ಸ್ನೇಹಿತನ ಮನೆಗೆ ಹೋಗಿ ಅವರು ತಿರುಪತಿ ಹುಂಡೀಲಿ ಹಾಕೋಕೆ ಅಂತ ಕವರಿನಲ್ಲಿ ದುಡ್ಡು ಹಾಕಿಕೊಟ್ಟರು. ಅದನ್ನು ಜೇಬಿನಲ್ಲಿಟ್ಟುಕೊಳ್ಳುವಾಗ ಗೌರು ಚೆಕ್ ನೆನಪಾಯಿತು. ''ತುಂಬಾ ಹೊತ್ತಾಗಿ ಹೋಯ್ತು. ನಾನು ಹೀಗಿಂದ ಹೀಗೇ ಮನೆಗೆ ಹೋಗ್ತೀನಿ ರಾತ್ರಿ ತಿರುಪತಿ ಬಸ್ ಸ್ಟ್ಯಾಂಡಿಗೆ ಬಾ ಮೊದ್ಲು ನಿಮ್ಮನೆ ಫೋನ್ ಟೇಬಲ್ ಮೇಲಿಟ್ಟಿರುವ ಚೆಕ್ ಕವರನ್ನು ಗೌರೂಗೆ ತಲುಪಿಸು. ಮರೀಬೇಡ'' ಎಂದ ರವಿ. ಮನಗೆ ಬಂದ ತಕ್ಷಣ ಗೌರೂಗೆ ''ಸಾರಿ ಇವತ್ತು ನಿಮ್ಮ ಮನೆಗೆ ಬರೋಕೆ ಆಗಲಿಲ್ಲ ಕಣೆ ರಾಜೀವ್ ನಿನಗೆ ಚೆಕ್ ತಲುಪಿಸುತ್ತಾನೆ. ನಾನು ತಿರುಪತಿಯಿಂದ ಬಂದ್ಮೇಲೆ ನಿನ್ನ ನೋಡ್ತೀನಿ' ಅಂತ ಫೋನ್ ಮಾಡಿದ.

ಫೋನ್ ಟೇಬಲ್ ಮೇಲಿದ್ದ ಚೆಕ್ ಕವರು ಗಾಳಿಗೆ ಹಾರುತ್ತೆ ಅಂತ ಕೆಲಸದವಳು ಕಸ ಗುಡಿಸುವಾಗ ಅಲ್ಲೆ ಇದ್ದ ಪತ್ರಿಕೆಯೊಳಗೆ ಇಟ್ಟಿದ್ದಳಂತೆ. ರಾಜೀವ್ ಮನೆಯೆಲ್ಲಾ ಹುಡುಕಿದರೂ ಸಿಗಲಿಲ್ಲ. ಆ ವೇಳೆಗೆ ರಾತ್ರಿ ಆಗ್ತಾ ಬಂದಿತ್ತು. ತಿರುಪತಿ ಬಸ್ಸಿಗೆ ಹೋಗೋ ಹೊತ್ತಿಗೆ ಊಟ ಮಾಡ್ಬೇಕು, ರೆಡಿ ಆಗ್ಬೇಕು, ಅಂತ ಊಟಕ್ಕೆ ಕೂತ ರಾಜೀವ ಊಟವಾಯ್ತು ಪತ್ರಿಕೆ ತಿರುವಿ ಹಾಕ್ತಿದ್ದಾಗ ಚೆಕ್ ಕವರ್ ಕೆಳಗೆ ಬಿತ್ತು. ''ಥ್ಯಾಂಕ್ ಗಾಡ್, ಇದನ್ನು ರವಿಗೇ ಕೊಟ್ಟುಬಿಡ್ತೀನಿ' ಅಂತ ಜೇಬಿನಲ್ಲಿ ಹಾಕ್ಕೊಂಡು ಬಸ್ ಸ್ಟ್ಯಾಂಡಿನಲ್ಲಿ ವೀಣ ನೋಡಿದ ತಕ್ಷಣ 'ಸಾರಿ ರವಿ ಗೌರೂಗೆ ಕೊಡೋಕೆ ಆಗಲಿಲ್ಲ' ಅಂತ ವಿಷಯ ತಿಳಿಸಿ ಚೆಕ್ ಕೊಟ್ಟ. ರವಿ ಮತ್ತೆ ಜೇಬಿಗೆ ಹಾಕ್ಕೊಂಡ.

ಆಷಾಡಮಾಸವಾದುದರಿಂದ ತಿರುಪತೀಲಿ ಜನವೇ ಇರಲಿಲ್ಲ. ಫಸ್ಟ್‌ಕ್ಲಾಸಾಗಿ ದರ್ಶನವಾಯ್ತು. ಹುಂಡಿಗೆ ಹಾಕೋಕೆ ಅಂತ ಬೆಳಿಗ್ಗೆಯಿಂದ ಒಂದು ನಾಲ್ಕಾರು ಜನ 10, 20, 100 ರೂಪಾಯಿ ಕವರಲ್ಲಿ ಹಾಕಿ ಕೊಟ್ಟಿದ್ದರು. ಜೇಬಿನಲ್ಲಿದ್ದ ಎಲ್ಲಾ ಕವರನ್ನು 'ಗೋವಿಂದೋ ಗೋವಿಂದ' ಅಂತ ಹುಂಡಿಗೆ ಹಾಕಿದ ರವಿ. ಎಲ್ಲಾ ಕವರ್ ಜೊತೆ ಚೆಕ್ ಇದ್ದ ಕವರ್‍ರೂ ತಿರುಪತಿಯ ಹುಂಡಿ ಸೇರಿತ್ತು. ಏನೋ ನೆನಪಾದವನಂತೆ ರವಿ 'ರಾಜೀವ ನೆನ್ನೆ ಬಸ್ ಸ್ಟಾಂಡಿನಲ್ಲಿ ಚೆಕ್ ಕವರ್ ಕೊಟ್ಟೆ ಅಲ್ಲವಾ.... ನಾನು ಎಲ್ಲಿ ಇಟ್ಕೊಂಡೆ'

ಅಂದಾಗ 'ಜೇಬಿನಲ್ಲೇ ಇಟ್ಕೊಂಡ್ರಲ್ಲ ರವಿ' ಅಂದ ಆಜೀವ್ ಗೋವಿಂದೋ ಗೋವಿಂದ, ತಿರುಪತಿ ಹುಂಡಿಗೆ ಗೌರು ಚೆಕ್ ಸಮರ್ಪಿತವಾಯಿತು. ಓಂಕಾರ್ ಇಂದ ಜ್ಯೋತಿ, ಜ್ಯೋತಿಯಿಂದ ರವಿ,. ರವಿಯಿಂದ ರಾಜೀವ್, ರಾಜೀವ್ ಇಂದ ಮತ್ತೆ ರವಿಯ ಜೇಬಿಗೆ ಬಂದ ಚೆಕ್ ತಿರುಪತಿ ಹುಂಡಿಗೆ ಸಮರ್ಪಿತವಾಗಬೇಕಾದರೆ ದೇವರ ಇಚ್ಛೆಯೇ ಸರಿ. ಹೋಗಲಿ ಈಗ ನಾವೆಲ್ಲಾ ಸೇರಿ ಅವಳ ಸಂಬಳ 2000 ರೂ. ವಾಪಸ್ಸು ಮಾಡೋಣ ಅಂದ ರವಿ. ಎಲ್ಲರೂ ಒಪ್ಪಿಕೊಂಡರು.

ಮಾರನೆದಿನ ಬೆಂಗಳೂರಿಗೆ ಹೋದಾಗ ಮೊದಲನೆ ಕೆಲಸ ಗೌರೂಗೆ ಚೆಕ್ ಕೊಟ್ಟಿದ್ದು. ತಿರುಪತಿ ಪ್ರಸಾದದೊಂದಿಗೆ 2000 ಕ್ಯಾಷ್ ಕೊಟ್ಟಾಗ ''ಇದೇನೋ ನನ್ನ ಸಂಬಳದ ಚೆಕ್ ಎಲ್ಲೋ' ಅಂದಳು. ''ಗೋವಿಂದ ಗೋವಿಂದ ನಮ್ಮೆಲ್ಲರ ಬೇಜವಾಬ್ದಾರಿ, ಮರೆವಿನಿಂದ ತುಂಬಾ ಜೋಪಾನವಾಗಿ ನಿನಗೆ ತಲುಪಿಸಬೇಕಾಗಿದ್ದ ಚೆಕ್ ತಿರುಪತಿ ಹುಂಡಿಗೆ ಸೇರಿತು. ಅಂತ ನಕ್ಕ ರವಿ. ''ಹೋಗಲಿ ಬಿಡೋ ನಾನು ಮನಸ್ಸಿನಲ್ಲಿ ಒಂದು ಸಾರ್ತೀನೂ ದೇವರಿಗೆ ಹಾಕ್ತೀನಿ ಅಂದ್ಕೊಳ್ಳಲಿಲ್ಲ ಹೋಟಲ್, ಸಿನಿಮಾ, ಹೊಸ ಡ್ರೆಸ್ ಅಂತ ಪ್ಲಾನ್ ಮಾಡಿದ್ದೆ. ದೇವರಿಗೆ ಅದು ಇಷ್ಟವಾಗಲಿಲ್ಲ ಅಂತ ಕಾಣುತ್ತೆ ನೀವೆಲ್ಲಾ ಯಾಕೆ ಫೈನ್ ಕೊಡ್ಬೇಕು ನಾನೆ ಹಾಕಿದೆ ಅಂದ್ಕೋತೀನಿ ಬಿಡು ಅಂದ್ಲು. 'ಛೆ... ಛೆ... ನಿನ್ನ ಮೊದಲ ತಿಂಗಳ ಸಂಬಳ ನಿನ್ನ ಕೈ ಸೇರಲೇ ಬೇಕು ತಗೋ ಅಂತ ಅವಳ ಕೈಗೆ ತುರುಕಿದ ರವಿ.

ಜಾಮೀನು

ಟಾಡಾ ಕೋರ್ಟಿಗೆ ಟಾ, ಟಾ
ಎನ್ನುವ ಸಂಜಯ,
ಮರೆಯದಿರು ನೀ, ಜಾಮೀನು
ಎಂಬ ಬಲೆಯಲ್ಲಿಹ ಮೀನು!

ವಿಕಟಕವಿ

ಹನಿಗವನ


ನೀಳ್ಗವನಗಳ ಬರೆದು
ಹಿಗ್ಗುತ್ತಿದ್ದ ಕವಿ,
ಹನಿಗವಗಳನೋದಿ
ಉದ್ಗರಿಸಿದ, 'ಇದೇ ಸವಿ!'

ಕಪಟಕವಿ

ವಿಶಿಷ್ಟಾರ್ಥ ಕೋಶ

ಡಾ|| ಶ್ರೀ ವೆಂಕಟರಮಣ

ರಾಜಕಾರಣಿ-	ವ್ಯವಸ್ಥಿತವಾಗಿ ಅವ್ಯವಸ್ಥೆ ಉಂಟುಮಾಡುವವ.
ಪ್ರಜಾಸತ್ತೆ-	ಪ್ರಜೆ ಸಾಯುವಂತೆ ಮಾಡುವ ಸನ್ನಿವೇಶ
ಚಂದ್ರ-	ಸೂರ್ಯನಿರದಾಗ ಬೆಳಕು ನೀಡುವ ಮಹಾನುಭಾವ.
ಕಳ್ಳ-	ನಿಮ್ಮ ಮನೆಯಲ್ಲಿ ಅನೇಕ ಅನವಶ್ಯಕ ವಸ್ತುಗಳಿವೆ ಎಂದು ದೃಢವಾಗಿ ನಂಬಿದವ.
ಹಾಲು-	ನೀರನ್ನು ಬಹುತೇಕ ಹೋಲುವ ಒಂದು ದ್ರವ.
ಹೆಂಡತಿ-	ಬೇರೆಯವರದಾಗಿರುವಾಗ ಅಂದವಾಗಿ ಕಾಣಿಸುವ ಬಾಬತ್ತು.
ಭಾಗವತ-	ಲಂಚಾವತಾರದ ಇಂದಿನ ದಿನಗಳಲ್ಲಿ ತಮ್ಮ ಭಾಗವನ್ನು ತರಿಸುವ ಮಾರ್ಗಗಳನ್ನು ತಿಳಿಸುವ ಕೈಪಿಡಿ.
ಸ್ವರ್ಗ-	ನರಕದಲ್ಲಿ ಸ್ಥಳಾವಕಾಶವಿಲ್ಲದಿರುವಾಗ ಜನರಿಗೆ ತಾತ್ಕಾಲಿಕ ತಂಗುದಾಣ.
ಬ್ಯಾಂಕು-	ನಿಮ್ಮ ಹಣವನ್ನು ಯಾರ್ಯಾರಿಗೋ ನೀಡಲು ಒಂದು ವ್ಯವಸ್ಥೆ.
ಸಾಲಗಾರ-	ಏಕಮುಖ ವ್ಯವಹಾರಕ್ಕೆ ಒಂದು ಅತ್ಯುತ್ತಮ ನಿದರ್ಶನ.
ಕಾಡು-	ವಾನಪ್ರಸ್ಥಕ್ಕೆ ಅತ್ಯವಶ್ಯ ವಸ್ತು. ಈಗ ಇದರ ಕೊರತೆಯಿಂದ ಜನ ವಾನಪ್ರಸ್ಥವಿಲ್ಲದೆಯೇ ತೃಪ್ತರಾಗಬೇಕಾಗಿದೆ.
ಕಾರ್ಯಾಲಯ-	ಕಾರ್ಯ ಲಯವಾಗುವ ಅಂದರೆ ನಷ್ಟವಾಗುವ ಜಾಗ; ವಿದ್ಯಾರ್ಥಿನಿ ಲಯ ಎಂಬಂತೆ!
ತುಪ್ಪ-	ಯಾವ ತರಹದ ಎಣ್ಣೆಯೂ ಸಿಗದಾಗ ಸಿಹಿ ತಿಂಡಿ ತಯಾರಿಸಲು ಬಳಸುವ ಮಾಧ್ಯಮ. ಅದೃಷ್ಟವಶಾತ್ ಅಂಥ ಬರಗಾಲ ಅಪರೂಪ!
ನದಿ-	ಓರೆಕೋರೆಯಾಗಿ ಹರಿದು ರಾಜ್ಯಗಳ ನಡುವೆ ವಿರಸಕ್ಕೆ ಕಾರಣವಾಗುವ ವಸ್ತು.
ದೇವರು-	ನಮ್ಮ ಕಷ್ಟಗಳಿಗೆಲ್ಲ ಜವಾಬ್ದಾರವಾಗಬೇಕಾಗುವ ಪರಿಕಲ್ಪನೆ, ಪಾಪ!



Printed by V.R. NATH for the Publisher M. SHIVAKUMAR, Published and owned by M. SHIVA KUMAR, 36. 6th Main Road, Malleswaram, Bangalore-560 003. Printed at IMPRESSIONS, 404. Sampige Road, Malleswaram, Bangalore-560 003. Editor : M. SHIVAKUMAR.